ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 15 | ಏಪ್ರಿಲ್ 10, 1983 | ಬೆಲೆ 60 ಪೈಸೆ

ವಿಧಾನಪರಿಷತ್ತಿನಲ್ಲಿ :

ಕಾರ್ಮಿಕ ವರ್ಗಕ್ಕೆ ಅಜೀಜ್‌ಸೇಠರ ಎಚ್ಚರಿಕೆ !

"ಕಾರ್ಮಿಕ ಸಂಘಟನೆ ಹೆಸರಿನಲ್ಲಿ ನ್ಯಾಯಬಾಹಿರ ಹಾಗೂ ಹಿಂಸಾ ಪ್ರವೃತ್ತಿಯನ್ನು ಸರ್ಕಾರ ಸಹಿಸುವುದಿಲ್ಲ. ಅಂತಹವರು ಯಾವ ಪಕ್ಷಕ್ಕೆ ಸೇರಿದವರೇ ಆಗಿರಲಿ ಅವರ ಮೇಲೆ ಉಗ್ರ ಕ್ರಮ ಖಂಡಿತ." ಕಾರ್ಮಿಕ ಸಚಿವ ಅಜೀಜ್ ಸೇಟ್ ಅವರು ನೀಡಿದ ಎಚ್ಚರಿಕೆ, ವಿಧಾನಪರಿಷತ್ತಿನಲ್ಲಿ.

ಇತ್ತೀಚೆಗೆ ಕೆಲವರು ಹಿಂಸಾಪ್ರವೃತ್ತಿಯೇ ಕಾರ್ಮಿಕ ಸಂಘಟನೆ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆಂದೂ, ಅಂತಹವರನ್ನು ವಿಚಾರಿಸಿಕೊಳ್ಳಲು ಕಾನೂನು ವ್ಯವಸ್ಥೆಯಿದೆ ಎಂದೂ ಕಾರ್ಮಿಕ ಮಂತ್ರಿಗಳು ಘೋಷಣಾ ಬಿಟ್ಟಿದ್ದಾರೆ.

ಈ ರೀತಿ ಎಚ್ಚರಿಕೆ ಮಾತುಗಳನ್ನಾಡುವ ಅಜೀಜ್ ಸೇಟ್–ಕಾರ್ಮಿಕ ಮಂತ್ರಿಯವರು, ಹಿಂಸಾಚಾರಕ್ಕೆ ಕಾರಣಭೂತರು ಯಾರು ? ಪ್ರಚೋದನೆ ಕೊಡುವವರು ಯಾರು, ಎಂಬ ವಿಷಯದ ಕುರಿತು ವಿಧಾನಪರಿಷತ್ತಿನಲ್ಲೇ ತಮ್ಮ ಸಂಶೋಧನೆಯನ್ನು ಬಹಿರಂಗಗೊಳಿಸಿದ್ದಿದ್ದರೆ ಮಂತ್ರಿಗಳ ಮನಸ್ಸು ಯಾವ ಕಡೆಗೆ ವಾಲಿದೆ ಎಂಬುದನ್ನು ತಿಳಿಯಲು ಅನುಕೂಲವಾಗುತ್ತಿತ್ತು.

ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲೇ ಇತ್ತೀಚೆಗೆ ಹಲವಾರು ಹೋರಾಟಗಳು ನಡೆದಿವೆ. ಕನಿಷ್ಟ ವೇತನ ಜಾರಿಗೊಳಿಸುವಿಕೆ, ನೌಕರಿ ಭದ್ರತೆ, ಕಂಟ್ರ್ಯಾಕ್ಟ್ ಕೆಲಸಗಾರರ ಸಮಸ್ಯೆಗಳು, ಹೊಸ ವೇತನಕ್ಕಾಗಿ ಹಾಗೂ ಇತರ ಬೇಡಿಕೆಗಳಿಗಾಗಿ ಒಪ್ಪಂದಗಳ ಜ್ಯಾರಿಗಾಗಿ-ಹೀಗೆ ನಾನಾ ತರದ ಬೇಡಿಕೆಗಳಿಗಾಗಿ ಹೋರಾಟ ನಡೆಯುತ್ತಲೇ ಇದೆ. ಇದರಂತೆಯೇ ಯೂನಿಯನ್‌ಗಳ ಚುನಾವಣೆ, ಮಾನ್ಯತೆಗಳ ಸಲುವಾಗಿಯೂ ಚಳುವಳಿ ನಡೆಯುತ್ತಿವೆ. ಕಾರ್ಮಿಕರು ಎದುರಿಸುತ್ತಿರುವ ಜೀವಂತ ಸಮಸ್ಯೆಗಳಿಗೆ ಸರ್ಕಾರದ ಸ್ಪಷ್ಟ ವಿಶ್ಲೇಷಣೆ-ಪರಿಹಾರಗಳಿಲ್ಲ.

ಹಿಂಸಾಚಾರವನ್ನು ಯಾರೂ ಪ್ರಚೋದಿಸಬಾರದು; ಅದು ಯಾರಿಗೂ ಭೂಷಣವಲ್ಲ. ಆದರೆ ನ್ಯಾಯವಾದ ಬೇಡಿಕೆಗಳಿಗಾಗಿ ಅಂದರೆ ಉದಾಹರಣೆಗಾಗಿ ಕನಿಷ್ಟ ಕೂಲಿ ಕಾಯ್ದೆಯಂತೆ ವೇತನ, ಕಾಯ್ದೆ ಪ್ರಕಾರ ಆದ ಒಪ್ಪಂದವನ್ನು ಕಾರ್ಯರೂಪದಲ್ಲಿಳಿಸುವುದು, ಕಂಟ್ರ್ಯಾಕ್ಟ್ ಕಾಯ್ದೆಗನುಸಾರವಾಗಿಯೇ ಬೋನಸ್ ಮತ್ತಿನ್ನಿತರ ಸವಲತ್ತುಗಳನ್ನು ಕೊಡುವುದು. ಚಾಲ್ತಿಯಲ್ಲಿರುವ ಅನುಕೂಲತೆಗಳನ್ನು ಮುಂದುವರಿಸುವುದು, ಯೂನಿಯನ್ನಿನ ಘಟನೆಯಂತೆ ಚುನಾವಣೆ ನಡೆಸುವುದು ಇಂಥ ಬೇಡಿಕೆಗಳನ್ನು ಮುಂಡಿಸಿದಾಗ ಮಧ್ಯೆ ಪ್ರವೇಶಿಸುವ ಜವಾಬ್ದಾರಿ ಸರ್ಕಾರದ್ದಲ್ಲವೇ? ಸರ್ಕಾರ ಮಧ್ಯೆ ಪ್ರವೇಶ ಮಾಡದಿದ್ದಾಗ ಕಾರ್ಮಿಕರು ಹೋರಾಟ ಪ್ರಾರಂಭಿಸುತ್ತಾರೆ. ಅದನ್ನು ಮುರಿಯಲು ಮಾಲೀಕರು ಗೂಂಡಾಗಳನ್ನು ಪಯೋಗಿಸುತ್ತಾರೆ. ಅದನ್ನೆದುರಿಸ ಬೇಕೆ? ಅಥವಾ ಅದಕ್ಕೆ ಬಲಿಯಾಗಬೇಕೇ? ಇಷ್ಟೆಲ್ಲಾ ಆದರೂ ಸರ್ಕಾರ ತನ್ನ ಅಸಹಾಯಕತೆಯನ್ನು ತೋರ್ಪಡಿಸುತ್ತದೆ, ಮುಂದೇನು ?

ಹರಿಹರ ಪಾಲಿಫೈಬರ್ ಕಂಟ್ರ್ಯಾಕ್ಟ್ ಕೆಲಸಗಾರರ, ಆಂಧ್ರ ಸ್ಟೀಲ್, ರಾವ್ ಇನ್‌ಸ್ಯುಲೇಟರ್ಸ್, ಶಹಬಾದ ಎ. ಸಿ. ಸಿ., ರಾಮ್‌ಕುಮಾರ್ ಮಿಲ್ಸ್ ಫ್ಯಾಕ್ಟರಿ—ಇವುಗಳೆಲ್ಲ ಸರ್ಕಾರದ ಕಾರ್ಮಿಕ ನೀತಿಯನ್ನು, ಸರ್ಕಾರದ ಕಾರ್ಮಿಕ ಕಾಯಿದೆ ಕಾನೂನುಗಳನ್ನು ಪರೀಕ್ಷಿಸುವ ಹೋರಾಟಗಳು. ಸರ್ಕಾರ ತನ್ನ ಕಾಯ್ದೆಗಳನ್ನು ಧೈರ್ಯದಿಂದ ಅನುಷ್ಠಾನದಲ್ಲಿ ತರಲು ಹಿಂದೇಟು ಹಾಕುತ್ತಿರುವುದರಿಂದಲೇ ಈ ಹೋರಾಟಗಳು ನಡೆಯುತ್ತಿವೆ. ಸರ್ಕಾರದ ವೈಫಲ್ಯ, ಮಾಲೀಕರ ಹಟಮಾರಿತನಗಳೇ ಕಾರ್ಮಿಕರಲ್ಲಿ ನಿರಾಶಾಭಾವನೆ ಹತಾಶೆಗಳನ್ನುಂಟು ಮಾಡುತ್ತಿದೆ. ಆ ಸಮಯದಲ್ಲಿ ಹೋರಾಟವನ್ನು ಮೊಟಕುಗೊಳಿಸಲು ತೆಗೆದುಕೊಂಡು ಹೋಗಬೇಕಾಗುತ್ತದೆ. ಅವುಗಳನ್ನೆಲ್ಲ ಹಿಂಸಾಚಾರವೆಂದು ಆರೋಪಿಸುವ ಧೈರ್ಯ ಕಾರ್ಮಿಕ ಮಂತ್ರಿ ಅಜೀಜ್‌ಸೇಟರಿಗಿದೆ. ಆದರೆ ಮಾಲೀಕರ ಹಟಮಾರಿತನಕ್ಕೆ, ಅವರ ಗೂಂಡಾಗಿರಿಗೆ, ಕಾರ್ಮಿಕರನ್ನು ಬಲಿಪಶುಗಳನ್ನಾಗಿ ಮಾಡುತ್ತಿರುವುದನ್ನು ಮಾತ್ರ ನೋಡಲು ಕಾರ್ಮಿಕ ಮಂತ್ರಿಗಳಿಗೆ ಕಣ್ಣುಗಳಿದ್ದಂತೆ ಕಂಡು ಬರುವುದಿಲ್ಲ. ಕಾರ್ಮಿಕರ ಹಿತಸಾಧನೆಗಾಗಿ ತಮ್ಮ ಸರ್ಕಾರವೇ ಮಾಡಿದ ಕಾನೂನುಗಳನ್ನು ಮಾಲೀಕ ವರ್ಗ ಪಾಲಿಸುತ್ತಾರೋ ಇಲ್ಲವೋ ಎಂದು ನೋಡಿ, ಮಾಲಿಕರು ಚಾಚೂ ತಪ್ಪದೆ ಕಾರ್ಮಿಕ ಪರ ಕಾನೂನುಗಳನ್ನು ಅನುಷ್ಠಾನದಲ್ಲಿ ತರುವಂತೆ ಮಾಡಲು ಕಾರ್ಮಿಕ ಮಂತ್ರಿಗಳು ಕ್ರಮ ಯಾಕೆ ತೆಗೆದುಕೊಳ್ಳುತ್ತಿಲ್ಲ. ವಿಧಾನಪರಿಷತ್ತಿನಲ್ಲಿ ಅವರಿಗೆ ಯಾಕೆ ಎಚ್ಚರಿಕೆ ಕೊಟ್ಟಿಲ್ಲ ? ಮಾಲೀಕರ ಮಾಲಿಕ ಗುಂಡಯ್ಯ ಶೆಟ್ಟಿ ಎದುರಿಗೆ ಕುಳಿತಿರುವುದನ್ನು ಕಂಡೇ ? ಅಜೀಜ್‌ಸೇಟರು ಇದಕ್ಕೆ ಉತ್ತರ ಕೊಡಬೇಕು.

ಯೂನಿಯನ್‌ಗಳಿಗೆ ಮಾನ್ಯತೆ ನೀಡುವ, ಯೂನಿಯನ್‌ಗಳಿಗೆ ಚುನಾವಣೆ ನಡೆಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇ ಇಲ್ಲ. ಇವುಗಳ ಕುರಿತು ಅಜೀಜ್‌ಸೇಟರು ತಮ್ಮ ನಿಲುವು ಸ್ಪಷ್ಟಪಡಿಸುವರೆ ?

ಉತ್ಪಾದನಾ ಶಕ್ತಿ ಅಂದರೆ ಕಾರ್ಮಿಕ ವರ್ಗ ಮತ್ತು ಉತ್ಪಾದನಾ ಸಾಧನಗಳ ಮಾಲೀಕತ್ವ ಇವರೊಳಗಿನ ಸಂಬಂಧ ಉತ್ಪಾದನಾ ಸಾಧನೆಗಳ ಮಾಲಿಕತ್ವ ಯಾರದಾಗಿದೆ ಎಂಬುದನ್ನು ಅವಲಂಬಿಸಿದೆ. ಈಗಿನ ಬಂಡವಾಳ ಶಾಹಿ ಸಮಾಜದಲ್ಲಿ ಉತ್ಪಾದನಾ ಸಂಬಂಧ, ಮಾಲಿಕರ ಪ್ರಭುತ್ವ, ಕಾರ್ಮಿಕರ ಅವಲಂಬನ, ಸುಲಿಗೆ ಹಾಗೂ ದಬ್ಬಾಳಿಕೆಗಳನ್ನೇ ಹೊಂದಿದೆ. ಇವೆಲ್ಲ ನಾಶವಾಗಬೇಕಾದರೆ ಸಮತಾವಾದಿ ಉತ್ಪಾದನಾ ಸಂಬಂಧ ಬೆಳೆದು

(ಕಿನೇ ಪುಟ ನೋಡಿ)

ವಿರೋಧೀ ಸದಸ್ಯರ ಮೇಲೆ ಹಲ್ಲೆ

ಕರುಣಾಕರನ್ ಸರ್ಕಾರದ ಅತಿರೇಕ

ಕಳೆದ ತಿಂಗಳ 28-29ರಂದು ಕೇರಳ ವಿಧಾನ ಸಭೆಯಲ್ಲಿ ನಡೆದಿರುವ ಘಟನೆಗಳು ಎಲ್ಲಾ ಪ್ರಜಾಪ್ರಭುತ್ವವಾದಿಗಳಲ್ಲೂ ದಿಗ್ಭ್ರಮೆ ಹುಟ್ಟಿಸಿದೆ.

ವಿಧಾನಸಭೆಯ ಒಳಗೆ ಜನರಿಂದ ಆರಿಸಲ್ಪಟ್ಟ ವಿರೋಧ ಪಕ್ಷಗಳ ಪ್ರತಿನಿಧಿಗಳ ಮೇಲೆ ಆಕ್ರಮಣ. ವಿಧಾನಸಭೆಯ ರತ್ನಗಂಬಳಿಗಳ ಮೇಲೆ ರಕ್ತದೋಕುಳಿ ನಂತರ ವಿರೋಧಿ ಸದಸ್ಯರುಗಳು ಆಸ್ಪತ್ರೆಯಲ್ಲಿ ದಾಖಲು. ಕೇರಳ ಸರ್ಕಾರದ ಅತ್ಯಂತ ನಾಚಿಕೆಗೇಡಿನ ವರ್ತನೆ.

ಪೋಲೀಸ್ ಪಡೆಯನ್ನು ವಿಧಾನಸಭೆಯೊಳಗೆ ಕರೆಸಿ, ಪೋಲೀಸರ ರಕ್ಷಣೆಯಲ್ಲಿ ವಿಧಾನಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕಾದಂತಹ ನಾಚಿಕೆಗೇಡಿನ ಪರಿಸ್ಥಿತಿ ಕರುಣಾಕರನ್‌ರವರ ಸರ್ಕಾರಕ್ಕೆ ಒದಗಿದೆ.

ಕೇರಳಕ್ಕೆ ಕೇಂದ್ರ ಸರ್ಕಾರ ಅಗತ್ಯವಿರುವಷ್ಟು ಆಹಾರ ಧಾನ್ಯವನ್ನು ಸರಬರಾಜು ಮಾಡಲಿಲ್ಲವಾದ ಕಾರಣ ಆಹಾರ ಪರಿಸ್ಥಿತಿ ಹದಗೆಟ್ಟಿದೆ. ಸಾರ್ವಜನಿಕ ವಿತರಣೆ ಅಸ್ತವ್ಯಸ್ತಗೊಂಡಿದೆ. ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಸಿಕ್ಕಾಪಟ್ಟೆ ಹೆಚ್ಚತೊಡಗಿದೆ. ಇದರ ಬಗ್ಗೆ ಚರ್ಚೆಯನ್ನು ನಡೆಸಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸಿದವು.

ಅದೇ ಸಂದರ್ಭದಲ್ಲೇ ಕೇರಳ ರಾಜ್ಯವನ್ನು ಕೇಂದ್ರ ಸರ್ಕಾರ ಕಡೆಗಣಿಸುತ್ತಿರುವುದನ್ನು ಪ್ರತಿಭಟಿಸಿ ಆಡಳಿತ ಪಕ್ಷದ ಅಂಗ ಪಕ್ಷವಾದ ಜೋಸೆಫ್ ಕಾಂಗ್ರೆಸ್ ವಿಧಾನಸಭೆಯ ಹೊರಗೆ ಧರಣಿ ನಡೆಸುತ್ತಿತ್ತು.

ಜನತೆಯನ್ನು ತೀವ್ರವಾಗಿ ಕಾಡುತ್ತಿರುವ ಈ ಸಮಸ್ಯೆಯನ್ನು ಕುರಿತು ವಿಧಾನಸಭೆಯಲ್ಲಿ ಚರ್ಚೆಯನ್ನು ನಡೆಸಬೇಕೆಂದು ಒತ್ತಾಯಿಸಿದ ಕಾರಣಕ್ಕಾಗಿ ವಿರೋಧ ಪಕ್ಷಗಳ ಸದಸ್ಯರನ್ನು ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಾರದೆಂಬ ಉದ್ದೇಶದಿಂದ ಸಸ್ಪೆಂಡ್ ಮಾಡಲಾಯಿತು.

ಸೋಮವಾರ ನಡೆದ ಈ ಪ್ರಕರಣದಿಂದಾಗಿ ಕೇರಳ ವಿಧಾನಸಭೆ ಪೋಲೀಸ್ ಶಿಬಿರವಾಗಿ ಮಾರ್ಪಟ್ಟಿತು. ವಿರೋಧ ಪಕ್ಷಗಳ ಸದಸ್ಯರ ಹಕ್ಕುಗಳು ಕಸಿದುಕೊಳ್ಳಲ್ಪಟ್ಟಿತು.

ವಿರೋಧಿ ಸದಸ್ಯರನ್ನು ಬಲಾತ್ಕಾರವಾಗಿ ಅಮಾನತ್ತುಗೊಳಿಸಿ 5 ನಿಮಿಷಗಳಲ್ಲಿ 5 ಮಸೂದೆಗಳನ್ನು ಜಾರಿ ಮಾಡಲಾಗಿದೆ ಎಂಬ ಸಂಗತಿ ತುಂಬಾ ಹಾಸ್ಯಾಸ್ಪದವಾಗಿದೆ. ಅಲ್ಲದೆ ವಿಧಾನಸಭೆಯನ್ನು ಅವಹೇಳನಗೊಳಿಸುವಂತಹುದಾಗಿದೆ. ಸಮಸ್ಯೆಯನ್ನು ವಿಧಾನಸಭೆಯೊಳಗೆ ಎದುರಿಸಲಾಗದ ಆಳುವ ಪಕ್ಷ, ವಿರೋಧೀ ಸದಸ್ಯರ ಮೇಲೆ ಧಾಳಿ ನಡೆಸಿದ್ದು ಹೇಯಕೃತ್ಯ.

ವಿರೋಧ ಪಕ್ಷಗಳ ಸದಸ್ಯರು ಸಭಾ ನಿಯಮಗಳನ್ನೇನಾದರೂ ಉಲ್ಲಂಘಿಸಿದ್ದರೆ ಅದಕ್ಕೆ ಕಾನೂನು ಪ್ರಕಾರ ಕ್ರಮಗಳನ್ನು ಕೈಗೊಳ್ಳಬಹುದಿತ್ತೇ ಹೊರತು ಪೋಲೀಸರನ್ನೂ ಗೂಂಡಾಗಳನ್ನೂ ವಿಧಾನಸಭೆಯ ಆವರಣದೊಳಗೆ ಕರೆತಂದು ಧಾಳಿ ನಡೆಸಿದ್ದು ಪ್ರಜಾಪ್ರಭುತ್ವಕ್ಕೆ ಮಾಡಿರುವ ಗರಿಷ್ಠ ಅಪಮಾನವಾಗಿದೆ. ಸರ್ವಾಧಿಕಾರೀ ಕೃತ್ಯವಾಗಿದೆ.

ಸರ್ಕಾರಕ್ಕೆ ವಿರೋಧವಾದ ಅಭಿಪ್ರಾಯಗಳನ್ನು ಹೊಂದಿದವರನ್ನು ಈ ರೀತಿಯಾಗಿ ನಡೆಸಿಕೊಳ್ಳಲಾಗುವುದೆಂಬುದರ ಮುನ್ಸೂಚನೆಯೇನೋ ಎಂಬಂತಿದೆ ಈ ಘಟನೆ. ಇದು ಖಂಡಿತವಾಗಿಯೂ ಒಂದು ಅಪಾಯಕಾರಿ ನಡವಳಿಕೆಯಾಗಿದೆ.

ಕರುಣಾಕರನ್ ಸರ್ಕಾರದ ಈ ಕೃತ್ಯವನ್ನು ವಿರೋಧ ಪಕ್ಷಗಳು ಮಾತ್ರವಲ್ಲದೆ ಪತ್ರಿಕೋದ್ಯೋಗಿಗಳೂ ಕೂಡಾ ವಿರೋಧಿಸಿ ವಿಧಾನ ಸಭಾ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಪತ್ರಿಕಾ ಪ್ರತಿನಿಧಿಗಳಿಗೆ ಅನುಮತಿ ನೀಡುವ ವಿಚಾರದಲ್ಲಿ ಸರ್ಕಾರ ಪಕ್ಷಪಾತ ಧೋರಣೆಯನ್ನು ಅನುಸರಿಸಿದೆಯೆಂಬುದೇ ಅವರ ಆರೋಪ.

ವಿಧಾನಸಭೆಯ ಶಿಸ್ತನ್ನೂ, ಗಾಂಭೀರ್ಯವನ್ನೂ, ಗೌರವವನ್ನೂ ರಕ್ಷಿಸಬೇಕಾದ ಸಭಾಧ್ಯಕ್ಷರು ಗಂಭೀರ ಸ್ವರೂಪದ ಗಲಭೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಕೇರಳ ಜನತೆಯ ಹೋರಾಟವನ್ನು ದಬ್ಬಾಳಿಕೆಯ ಮೂಲಕ ಹತ್ತಿಕ್ಕುತ್ತಿರುವ ಕರುಣಾಕರನ್ ಸರ್ಕಾರ ಜನತೆಯಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಮೇಲೂ ಕೂಡ ಹಲ್ಲೆ ನಡೆಸುತ್ತಿದೆ. ಇದನ್ನು ಕೇರಳದ ಜನತೆ ಹಾಗೂ ವಿರೋಧ ಪಕ್ಷಗಳು ಸವಾಲಾಗಿ ಸ್ವೀಕರಿಸಿ, ಸರ್ಕಾರದ ಜನವಿರೋಧಿ ಧೋರಣೆಗಳನ್ನು ಸಮರ್ಥವಾಗಿ ಎದುರಿಸುವುದು ಖಂಡಿತ.

ಕರ್ನಾಟಕ ರಾಜ್ಯದಲ್ಲಿ

ವಿಧಾನಸಭೆಯ ಪ್ರಥಮ ಅಧಿವೇಶನ

ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ ಪ್ರಥಮ ಬಜೆಟ್ ಅಧಿವೇಶನ ಯಶಸ್ವಿಯಾಗಿಯೇ ಮುಕ್ತಾಯವಾಯಿತೆಂದರೆ ತಪ್ಪಾಗಲಾರದು. ರಾಮಕೃಷ್ಣ ಹೆಗಡೆ ಮತ್ತು ಅಬ್ದುಲ್‌ನಜೀರ್‌ಸಾಬ್ ಹಾಗೆಯೇ ಎಸ್.ಆರ್. ಬೊಮ್ಮಾಯಿಯವರು ಮೊಯಿಲಿ, ಸುಬ್ಬಯ್ಯ, ಬಂಗಾರಪ್ಪನವರ ರಾಜಕೀಯ ವಿರೋಧವನ್ನು ಸಮರ್ಪಕವಾಗಿಯೇ ವಿರೋಧಿಸಿರುವುದು ಕಂಡುಬಂದಿದೆ.

ತಮ್ಮ ಚುನಾವಣಾ ಘೋಷಣೆಯಲ್ಲಿದ್ದ ಕೆಲವಂಶಗಳನ್ನು ಕಾರ್ಯರೂಪದಲ್ಲಿ ತರಲು ಹಾಗೆಯೇ ಅಂದಾಜು ಪತ್ರಿಕೆಯಲ್ಲಿ ಪರಿಹಾರ ಒದಗಿಸಲು ಪ್ರಯತ್ನ ಮಾಡಿದ್ದಾರೆ.

ಯಾವುದೇ ಶಾಸಕತನ್ನನ್ನು ಅಭ್ಯರ್ಥಿಯಾಗಿ ನಿಲ್ಲಿಸಿದ ರಾಜಕೀಯ ಪಕ್ಷವನ್ನು ಚುನಾಯಿತನಾದ ನಂತರ ಬಿಟ್ಟರೆ ಆ ರೀತಿಯ ಪಕ್ಷಾಂತರವನ್ನು ನಿಷೇಧಿಸುವ ಮಸೂದೆ ಮಂಡಿಸಲಾಗಿದೆ. ಒಂದು ರಾಜಕೀಯ ಪಕ್ಷದ ಅಭ್ಯರ್ಥಿಯಾಗಿ ಚುನಾಯಿತನಾದ ಮೇಲೆ ವಿಧಾನಸಭೆಯಲ್ಲಿ ತನ್ನ ಅಧಿಕಾರಾವಧಿಯ ಪೂರ್ಣ ಕಾಲವನ್ನು ಅದೇ ಪಕ್ಷದ ಸದಸ್ಯನಾಗಿ ಮುಂದುವರಿಯಬೇಕು. ಒಬ್ಬ ಶಾಸಕ ಪಕ್ಷಾಂತರ ಮಾಡಿದ್ದಾನೆಯೇ ಇಲ್ಲವೇ ಎಂದು ಅಂತಿಮವಾಗಿ ತೀರ್ಮಾನಿಸುವ ಅಧಿಕಾರ ವಿಧಾನಸಭೆಯ ಅಧ್ಯಕ್ಷರಿಗೆ ಕೊಡಲಾಗಿದೆ. ಪಕ್ಷಾಂತರ ಮಾಡಿದ ಸದಸ್ಯರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸುವ ಅಧಿಕಾರ ರಾಜ್ಯ ವಿಧಾನಸಭೆಗೆ ಇಲ್ಲದಿದ್ದರೂ ಕೂಡ ಆ ರೀತಿ ಪಕ್ಷಾಂತರ ಮಾಡಿದಾತನಿಗೆ ತನ್ನ ಉಳಿದಿರುವ ಅಧಿಕಾರಾವಧಿಯಲ್ಲಿ ಮತದಾನಕ್ಕಾಗಲೀ ಸದಸ್ಯನಾಗಿ ಸಭೆಯಲ್ಲಿ ಹಾಜರಿರುವುದಕ್ಕಾಗಲೀ ಅವಕಾಶವಿಲ್ಲ. ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯಗಳ ಅರ್ಹತೆಯಲ್ಲಿ ಶೇಕಡ ಹತ್ತರಷ್ಟೇ ಲಭ್ಯ: ಹೀಗೆ ಹಲವಾರು ಸೌಲಭ್ಯಗಳಲ್ಲಿ ಕಡಿತವನ್ನುಂಟುಮಾಡಲಾಗಿದೆ ಈ ಮಸೂದೆಯಲ್ಲಿ.

ಆರೋಗ್ಯಕರವಾದ ಪ್ರಜಾಪ್ರಭುತ್ವ ಮತ್ತು ರಾಜಕೀಯ ಉಳಿಯಬೇಕಾದರೆ ಪಕ್ಷಾಂತರವನ್ನು ನಿಷೇಧಿಸಲೇಬೇಕೆಂದು, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಒತ್ತಾಯ ಮಾಡುತ್ತಲೇ ಬಂದಿದೆ. ಇಂದಿರಾ ಗಾಂಧಿ ಹಾಗೆಯೇ ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದಾಗಲೆಲ್ಲ ಪಕ್ಷಾಂತರ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುತ್ತೇವೆಂದು ಹೇಳುತ್ತಾ ಬಂದಿದ್ದರೂ ತಮ್ಮ ಸ್ವಾರ್ಥಕ್ಕಾಗಿಯೇ ಅಂತ ಮಸೂದೆ ಮಂಡಿಸುವ ಧೈರ್ಯ ಮಾಡಿಲ್ಲ.

ಕಾಶ್ಮೀರ ಸರ್ಕಾರ ಈಗಾಗಲೇ ಅಂಥ ಮಸೂದೆ ಪಾಸುಮಾಡಿದೆ. ಕರ್ನಾಟಕದ ಜನತಾ ಪಕ್ಷದ ಸರ್ಕಾರ ಈ ದಿಸೆಯಲ್ಲಿ ಮುಂದಾಗಿರುವುದು ಸ್ವಾಗತಾರ್ಹ. ಪಕ್ಷಾಂತರವನ್ನು ನಿಷೇಧಿಸುವ ಅಧಿಕಾರ ಲೋಕಸಭೆಗೆ ಮಾತ್ರ. ಲೋಕಸಭೆ ಅಥವ ವಿಧಾನಸಭೆಗೆ ಆರಿಸಿ ಹೋದ ವ್ಯಕ್ತಿ ತನ್ನ ಪಕ್ಷಕ್ಕೆ, ಮತದಾರರಿಗೆ ದ್ರೋಹಗೈದರೆ ಅಂಥವರನ್ನು ವಾಪಸ್ ಕರೆಸುವ ಅಧಿಕಾರ ಮತದಾರರಿಗಿರಬೇಕೆಂದು ಕಮುನಿಸ್ಟ್ ಪಾರ್ಟಿ ಪ್ರತಿಪಾದಿಸುತ್ತಾ ಬಂದಿತ್ತು. ಜನತೆಯ ಪ್ರೀತಿ, ವಿಶ್ವಾಸಗಳನ್ನು ಕಳೆದುಕೊಂಡ ಬಂಡವಾಳಶಾಹಿ ಪಕ್ಷಗಳಿಗೆ ತಮ್ಮ ಅಧಿಕಾರವನ್ನುಳಿಸಿಕೊಳ್ಳುವ ದುರುದ್ದೇಶದಿಂದ ಜಾತಿ, ಪ್ರಭಾವ, ಅಧಿಕಾರ ಮತ್ತು ಹಣದ ಆಸೆ ಹಾಗೆಯೇ ಬೆದರಿಕೆಗಳಿಂದ ಸದಸ್ಯರನ್ನು ಪಡೆಯುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವುದರಿಂದ, ತನ್ನ ಇತಿ ಮಿತಿಯೊಳಗೆ ರಾಮಕೃಷ್ಣಹೆಗಡೆ ಸರಕಾರ ಪಕ್ಷಾಂತರಿಗಳ ಮೇಲೆ ಕೆಲವು ಪ್ರತಿಬಂಧಗಳನ್ನು ಹೇರುವ ಮಸೂದೆ ತಂದಿದ್ದಾರೆ. ಎಷ್ಟರಮಟ್ಟಿಗೆ ಈ ಮಸೂದೆಯಿಂದ ಪಕ್ಷಾಂತರವನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗಬಹುದು, ಕೇಂದ್ರ ಸರ್ಕಾರ ಈ ಮಸೂದೆಗೆ ಒಪ್ಪಿಗೆ ಕೊಡುತ್ತದೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಾಗಿದೆ.

ಸ್ಟೈಫಂಡರಿಯವರ ನೌಕರಿಯನ್ನು ಕಾಯಂಗೊಳಿಸಲಾಗುವುದೆಂದು ಹಿಂದಿನ ಸರ್ಕಾರ ಹೇಳುತ್ತಾ ಬಂದಿದ್ದರೂ ಅದು ನೆನೆಗುದಿಗೆ ಬಿದ್ದಿತ್ತು. ಇವರ ಸೇವೆಯನ್ನು ಮುಂದುವರಿಸುವುದಲ್ಲವೆ, ಇವರನ್ನು ಕಾಯಂಗೊಳಿಸಲು ಅನುಕೂಲವಾಗುವಂತೆ ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಿ, ಆದಷ್ಟು ಬೇಗನೆ ಈ ಸಮಸ್ಯೆ ಪರಿಹರಿಸಲಾಗುವುದೆಂಬ ಆಶ್ವಾಸನೆ ವಿಧಾನಸಭೆಯಲ್ಲಿ ನೀಡಲಾಯಿತು.

ಇದರ ಜೊತೆಯಲ್ಲೇ ಪ್ರಾಥಮಿಕ ಶಾಲೆಗಳಲ್ಲಿ ಹಂಗಾಮಿ ಶಿಕ್ಷಕರನ್ನಾಗಿ ನೇಮಿಸಿಕೊಂಡಿರುವ ಸಾಧಾರಣ 10 ಸಾವಿರ ಪ್ರಾಥಮಿಕ ಶಿಕ್ಷಕರುಗಳನ್ನು ಕಾಯಂಗೊಳಿಸುವ ನಿರ್ಣಯವನ್ನೂ ಸಾರಲಾಯಿತು.

ನಗರಸಭೆ ಮತ್ತು ಕಾರ್ಪೊರೇಶನ್ ಚುನಾವಣೆಗಳಲ್ಲೂ ಹಾಗೆಯೇ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಂಚಾಯ್ತಿ ಚುನಾವಣೆಗಳಲ್ಲೂ ಮತದಾರರ ವಯೋಮಿತಿಯನ್ನು 18 ವರ್ಷಕ್ಕೆ ಇಳಿಸುವ ಮಸೂದೆಯನ್ನು ಪಾಸು ಮಾಡಲಾಯಿತು. ಜೂನ್ ತಿಂಗಳೊಳಗಾಗಿಯೇ ನಗರಸಭೆ ಮತ್ತು ಕಾರ್ಪೊರೇಶನ್‌ಗಳ ಚುನಾವಣೆಗಳನ್ನು ನಡೆಸುವುದಾಗಿ ಹೇಳಲಾಗಿದೆ.

ಲೋಕಾಯುಕ್ತ ನೇಮಕ

35 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಅದರ ನಿವಾರಣೆಗೆ ಉಪಾಯ ಕಂಡುಹಿಡಿಯಬೇಕೆಂದು ಲೋಕಾಯುಕ್ತ ಮತ್ತು ಉಪಲೋಕಾಯುಕ್ತಗಳನ್ನು ನೇಮಿಸುವ ಅಧಿಕಾರವನ್ನು ಗವರ್ನರರಿಗೆ ಕೊಡುವ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಈ ಮಸೂದೆಯ ವೈಶಿಷ್ಟ್ಯವೆಂದರೆ, ಸಾರ್ವಜನಿಕ ಸೇವೆ ಮಾಡುವವರೆಂದರೆ ಮುಖ್ಯ ಮಂತ್ರಿಯವರನ್ನೊಳಗೊಂಡು ಶಾಸಕರು, ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೆಯೇ ಸರಕಾರಿ ನೌಕರದಾರರನ್ನೆಲ್ಲಾ ನಿಶ್ಚಿತ ಭ್ರಷ್ಟಾಚಾರದ ಆರೋಪಕ್ಕೊಳಪಡಿಸಬಹುದು. ಪ್ರತಿ ವರ್ಷ ಜೂನ್ 30 ರೊಳಗೆ ಇವರೆಲ್ಲ ತಮ್ಮ ಮತ್ತು ತಮ್ಮ ಸಂಬಂಧಿಕರ ಆಸ್ತಿ–ಸಾಲಗಳ ಕುರಿತು ಮಾಹಿತಿ ನೀಡಬೇಕು. ಆ ರೀತಿ ಮಾಡದಿದ್ದಲ್ಲಿ ಮೂರು ಪ್ರಮುಖ ಪತ್ರಿಕೆಗಳಲ್ಲಿ ಅವರ ಹೆಸರನ್ನು ಪ್ರಕಟಿಸುವ ಅಧಿಕಾರವನ್ನು ಲೋಕಾಯುಕ್ತರಿಗೆ ಕೊಡಲಾಗಿದೆ.

ಬಂಡವಾಳಶಾಹಿ ಸಮಾಜದಲ್ಲಿ ರಚಿತವಾದ ಕಾಯಿದೆ–ಕಾನೂನುಗಳು ತಮ್ಮದೇ ಆದ ಮಿತಿಗಳನ್ನು ಹೊಂದಿರುತ್ತವೆ; ಅವುಗಳಲ್ಲಿ ಅಳವಡಿಸಿಕೊಂಡ ತತ್ವಗಳನ್ನು ಮೂಲೆ ಗುಂಪು ಮಾಡಿ ತಮ್ಮ ಹಿತರಕ್ಷಣೆ ಮಾಡಿಕೊಳ್ಳುವ ವ್ಯವಸ್ಥೆ ಸರಿಯಾಗಿಯೇ ಮಾಡಿಕೊಂಡಿರುತ್ತಾರೆ.

ಜನ ಜಾಗೃತಿಗೊಂಡು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಿ, ಬಂಡವಾಳಶಾಹಿ ಸರಕಾರ ಕಿತ್ತೊಗೆಯಲ್ಪಟ್ಟು, ಹೊಸ ಸರ್ಕಾರ ರಚನೆಯಾಗುವ ತನಕ, ಸಮತಾವಾದಿ ವಿಚಾರ ಸರಣಿ ಜನರಲ್ಲಿ ಮೂಡುವ ತನಕ, ನೌಕರಶಾಹಿ ವರ್ಗದಲ್ಲಿ ಹೊಸ ವಿಚಾರ ಮೂಡಿಬರುವ ತನಕ ಭ್ರಷ್ಟಾಚಾರ ನಾಶಗೊಳ್ಳುವುದು ಕಷ್ಟ. ಆದರೂ ಜಾಗೃತ ಜನತೆ ಅದನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು. ಏನೇ ಆಗಲೀ ಲೋಕಾಯುಕ್ತ ಮಸೂದೆಗೆ ಕೇಂದ್ರದ ಒಪ್ಪಿಗೆ ಸಿಕ್ಕಿದರೆ ಸದ್ಯದ ವಾತಾವರಣದಲ್ಲಿ ಸ್ವಲ್ಪ ಬದಲಾವಣೆಯಾಗಬಹುದೆಂದು ಆಶಿಸಬಹುದು. ಯಾಕೆಂದರೆ ಜನತಾ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಅಧಿಕಾರಿ ಮತ್ತು ಸರಕಾರಿಶಾಹಿ ವರ್ಗ ತನ್ನ ಚಟಗಳನ್ನು ಬಿಟ್ಟಿಲ್ಲ. ಅಂಥವರನ್ನು ಉಪಯೋಗಿಸುವವರೂ, ಪ್ರೋತ್ಸಾಹಿಸುವವರೂ ಇದ್ದಾರೆ. "ಹಣಕೊಟ್ಟರೆ, ಕೊಡುವ ಆಶ್ವಾಸನೆ ಇತ್ತರೆ ಕಾಗದ ಪತ್ರ ಮುಂದೆ ಸಾಗುತ್ತದೆ." ಈ ಮಾತು ಈ ಹೊತ್ತಿಗೂ ಜೀವಂತವಿದೆ. ಜನತಾ ಸರಕಾರ ಇದರತ್ತ ಗಮನ ಹರಿಸುವುದಗತ್ಯ.

ತೀವ್ರಗೊಳ್ಳುತ್ತಿರುವ ನಿರುದ್ಯೋಗ ಸಮಸ್ಯೆ

ದೇಶದಲ್ಲಿ ಗಂಭೀರವಾಗಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯತ್ತ ಸರಕಾರದ ಗಮನ ಸೆಳೆದು ಜನರಲ್ಲಿ ಜಾಗೃತಿಯನ್ನುಂಟು ಮಾಡುವ ದೃಷ್ಟಿಯಿಂದ ಪ್ರತಿವರ್ಷ ಮಾರ್ಚ್ 28ರಂದು ನಿರುದ್ಯೋಗ ಪ್ರತಿಭಟನಾ ದಿನಾಚರಣೆಯನ್ನಾಚರಿಸಲಾಗುತ್ತಿದೆ. ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ನಿನವರಿಂದ ಚಳುವಳಿ ಅತ್ಯಗತ್ಯ. ಜನರಲ್ಲೂ, ಯುವಕರಲ್ಲೂ ರಾಜಕೀಯ ಪರಿಜ್ಞಾನವನ್ನುಂಟು ಮಾಡಬೇಕು. ಸಮತಾವಾದಿ ಶಿಕ್ಷಣ ಕೊಡಬೇಕು. ಅವರ ವಿಚಾರಧಾರೆ ಕ್ರಾಂತಿಯತ್ತ ಹೋಗುವಂತೆ ಮಾಡಬೇಕು. ಉತ್ಪಾದನಾ ಸಾಧನೆಗಳು–ಕಾರ್ಖಾನೆ–ಭೂಮಿಗಳೆಲ್ಲ ಸಮಾಜದ ಸೊತ್ತಾಗಲಾರದೆ ನಿರುದ್ಯೋಗ ಸಮಸ್ಯೆ ಪರಿಹಾರವಾಗಲು ಸಾಧ್ಯವಿಲ್ಲ. ಬಂಡವಾಳಶಾಹಿ ಆರ್ಥಿಕ–ರಾಜಕೀಯ ನೀತಿ ಅದನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಯುವಕರಿಗೂ, ಸಾರ್ವಜನಿಕರಿಗೂ ನಿರುದ್ಯೋಗ ಉಂಟಾಗಲು ಕಾರಣ ವೇನು? ಅದಕ್ಕೆ ಕಾಯಂ ಪರಿಹಾರ ಎಲ್ಲಿದೆ, ಅದನ್ನು ಸಾಧಿಸಿಕೊಳ್ಳುವುದು ಹೇಗೆ ಇವುಗಳ ಕುರಿತು ತಿಳುವಳಿಕೆ ಕೊಟ್ಟು ಸಮಾಜ ಬದಲಾವಣೆಗಾಗಿ ಅವರು ಹೋರಾಡುವಂತೆ ಮಾಡುವುದು ಅತ್ಯಗತ್ಯ. ಈ ಕರ್ತವ್ಯದ ಕಡೆ ಎಲ್ಲರೂ ಗಮನ ಹರಿಸಲೇಬೇಕು.

ಕರ್ನಾಟಕದಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಕರ್ನಾಟಕ ಸರ್ಕಾರದ ಯೋಜನಾ ಇಲಾಖೆ ಹೊರಡಿಸಿದ "ಆರ್ಥಿಕ ಸಮಸ್ಯೆ"ಯಲ್ಲಿ ನಿರುದ್ಯೋಗಿಗಳ ಸಂಖ್ಯೆ 5.39 ಲಕ್ಷವೆಂದೂ, ಈ ಪೈಕಿ 4.23 ಲಕ್ಷದಷ್ಟು ನಿರುದ್ಯೋಗಿಗಳಿದ್ದಾರೆಂದೂ ಹೇಳಿದೆ. ಉದ್ಯೋಗ ವಿನಿಮಯ ಕೇಂದ್ರಗಳ 1981 ನವಂಬರ್ ತಿಂಗಳಲ್ಲಿ 6.27 ಲಕ್ಷ ನಿರುದ್ಯೋಗಿಗಳಿದ್ದರೆ, 1982 ನವಂಬರ್‌ನಲ್ಲಿ 6.79 ಲಕ್ಷಕ್ಕೇರಿದೆ. ಇದರಲ್ಲಿ ಪದವೀಧರರ ಸಂಖ್ಯೆ 80 ಸಾವಿರಕ್ಕೂ ಹೆಚ್ಚು. ಈ ರಿಜಿಸ್ಟರುಗಳು ನಿಜ ಪರಿಸ್ಥಿತಿಯನ್ನು ತೋರಿಸುವುದಿಲ್ಲ. ಯಾಕೆಂದರೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಹುಪಾಲು ಜನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೊಂದಾಯಿಸುವುದಿಲ್ಲ. ಹೀಗಾಗಿ ನಿಜವಾದ ನಿರುದ್ಯೋಗಿಗಳೆಷ್ಟಿದ್ದಾರೆಂದು ತಿಳಿಯುವುದು ಬಹಳ ಕಷ್ಟ.

ಹೀಗಿದ್ದರೂ ಕೂಡ ನಮ್ಮ ರಾಜ್ಯದ ಹಲವಾರು ಖಾತೆಗಳಲ್ಲಿ 50 ಸಾವಿರಕ್ಕೂ ಮೇಲ್ಪಟ್ಟು ಹುದ್ದೆಗಳು ಖಾಲಿ ಬಿದ್ದಿವೆ. ಇದರಲ್ಲಿ ಸಾದಾ ಗುಮಾಸ್ತರನ್ನೊಳಗೊಂಡು, ಜ್ಯೂನಿಯರ್ ಇಂಜಿನಿಯರ್ ಕಾಲೇಜು ಪ್ರಿನ್ಸಿಪಾಲರುಗಳವರೆಗೆ ಬಹು ವಿಧದ ಸ್ಥಾನಗಳನ್ನು ತುಂಬಬೇಕಾಗಿದೆ.

ಜನತಾ ಸರ್ಕಾರ ಅಸ್ತಿತ್ವದಲ್ಲಿದ್ದರೂ ಕೂಡ ಕೆಲವು ಸ್ಥಾನಗಳನ್ನು ತುಂಬುವಲ್ಲಿ ಹಣದ ಪ್ರಭಾವ ಇದೆಂದು ಕೇಳಿಬರುತ್ತಿದೆ. ಒಂದೆಡೆ ಲೋಕಾಯುಕ್ತವನ್ನು ನೇಮಿಸುತ್ತಿರುವಂತೆಯೇ ಮತ್ತೊಂದೆಡೆ ಹಣದ ಪ್ರಭಾವದಿಂದ ದೂರ ಹೋಗಲು ನೇಮಕ ಮಾಡುವ ಕಮಿಟಿಗಳಾಗಲೀ, ಅಧಿಕಾರಿಗಳಾಗಲೀ ತಯಾರಿಲ್ಲವೆಂದರೆ ನಮ್ಮ ಕಾಲದಲ್ಲಿ ಭ್ರಷ್ಟಾಚಾರ ಎಷ್ಟು ಆಳವಾಗಿ ಬೇರೂರಿದೆಯೆಂದು ಕಂಡುಬರುತ್ತದೆ.

ರಾಮಕೃಷ್ಣಹೆಗಡೆ ಸರಕಾರ ದೃಢ ಮನಸ್ಸಿನಿಂದ ಕೆಲಸಮಾಡಿದರೆ ಮಾತ್ರ ಇಂಥ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ. ಖಾಲಿ ಇರುವ ಸ್ಥಾನಗಳನ್ನು ಕೂಡಲೇ ತುಂಬಬೇಕು. ನ್ಯಾಯ ಬದ್ಧವಾಗಿ ಬಡ್ತಿ ಕೊಟ್ಟು ಇತರ ಖಾಲಿ ಜಾಗಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಬೇಕು.

ಡಿ.ವೈ.ಎಫ್.ಐ. ಶಾಖೆಯ ಉದ್ಘಾಟನೆ

3-4-83 ರಂದು ಹೆಚ್.ಎ.ಎಲ್ ಪ್ರದೇಶದಲ್ಲಿ DYFI ಸಂಘಟನಾ ಸಮಿತಿಯನ್ನು ಉದ್ಘಾಟಿಸಲಾಯಿತು. ಬೆಂಗಳೂರು ಜಿಲ್ಲಾ DYFI ಕಾರ್ಯದರ್ಶಿ ಕಾ॥ ಎಸ್. ಶಿವರಾಂ ಅವರು ಯುವಜನರು ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ಎದುರಿಸುತ್ತಿರುವ ಹಲವು ಸಮಸ್ಯೆಗಳು ಮತ್ತು ಡಿ. ವೈ. ಎಫ್. ಐ.ನ ಧ್ಯೇಯೋದ್ದೇಶ, ಕಾರ್ಯಕ್ರಮ ಹಾಗೂ ಸಂವಿಧಾನಗಳನ್ನು ವಿವರಿಸಿದರು.

ನಂತರ 14 ಯುವಜನರ ಸಮಿತಿಯನ್ನು ರಚಿಸಿ ಕಾ॥ ಶರಣಪ್ಪ ಅಧ್ಯಕ್ಷ, ಕೆ. ಚಂದ್ರು ಉಪಾಧ್ಯಕ್ಷ, ಕಾರ್ಯದರ್ಶಿ ವಿಜಯಕುಮಾರ್ ಹಾಗೂ ಸಹ ಕಾರ್ಯದರ್ಶಿಯಾಗಿ ಸಿ.ಕೆ. ವಿಜಯನ್ ಸದಸ್ಯರುಗಳಾಗಿ ಸಿ. ಟಿ. ಥಾಮಸ್, ವಿ. ಶಿವದಾಸನ್, ಜಿ.ಎಂ. ಮೋಹನ್ ಅನಂತಕೃಷ್ಣ, ಸ್ಟ್ಯಾನ್ಲಿ, ಅಲೆಕ್ಸ್, ರವೀಂದ್ರಕುಮಾರ್, ರಾಜಗೋಪಾಲ್ ಮತ್ತು ಭೂಪತಿ ಇವರುಗಳನ್ನು ಆಯ್ಕೆ ಮಾಡಲಾಯಿತು.

"ಮಾರ್ಕ್ಸ್‌ರ ಜೀವನದಲ್ಲಿ ಒಂದು ದಿನ"

ಲಂಡನ್ ಮೇ 20, 1857,

ಜೆನ್ನಿ ಮಾರ್ಕ್ಸ್‌ರವರ ಪತ್ರ

ಪ್ರೀತಿಯ ವೆಡಮೇಯರ್‌ರವರಿಗೆ,

ನಾವು ತಮ್ಮ ಪತ್ನಿಯವರು ಬಹಳ ಪ್ರೀತಿಯಿಂದ ಸಹಕಾರದಿಂದ ನಮ್ಮನ್ನು ಅತಿಥಿಗಳಾಗಿ ಇರಿಸಿಕೊಂಡು ವರ್ಷ ಕಳೆಯಿತು. ನಾವು ತಮ್ಮ ಮನೆಯಲ್ಲಿ ಯಾವುದೇ ವಿಧವಾದ ಕೊರತೆಯೂ ಇಲ್ಲದೆ ಸಂತೋಷದಿಂದ ಕಾಲ ಕಳೆದವು. ಆದರೆ ತದನಂತರ ನಾವು ನಿಮಗೆ ಪತ್ರ ಬರೆಯಲಾಗಲಿಲ್ಲ. ತಮ್ಮ ಪತ್ನಿಯವರು ನಮಗೆ ಬಹಳ ಪ್ರೀತಿಯಿಂದಲೂ ಉತ್ಸಾಹದಿಂದಲೂ ಬರೆದ ಕಾಗದಕ್ಕೂ ಕೂಡ ಉತ್ತರಿಸಲಾಗಲಿಲ್ಲ. ತಮಗೆ ಮಗು ಹುಟ್ಟಿದಾಗಲಾದರೂ ಮೌನವನ್ನು ಕಳೆದು ಉತ್ತರಿಸಬೇಕಿತ್ತು. ಈ ಕೊರತೆ ನನ್ನ ಮನಸ್ಸಿಗೆ ಬಹಳ ಕಾಡುತ್ತಿದೆ. ತಮಗೆ ಕಾಗದ ಬರೆಯುವಷ್ಟು ಶಕ್ತಿ ಇಲ್ಲದೆ ಇದ್ದುದರಿಂದ ನನಗೆ ಬರೆಯಲಾಗಲಿಲ್ಲ. ಈಗ ಈ ಕಾಗದ ಬರೆಯಲು ಕೂಡ ಬಹಳ ಕಷ್ಟವಾಗಿಯೇ ಇದೆ.

ಆದರೆ ಇಲ್ಲಿರುವ ಹೀನಕರವಾದ ಪರಿಸ್ಥಿತಿ ನನ್ನನ್ನು ಈ ಕಾಗದ ಬರೆಯುವಂತೆ ಮಾಡುತ್ತಿದೆ. ನನ್ನ ಪತಿಯವರು "ರೀವ್ಯೂ" ಪತ್ರಿಕೆಯಲ್ಲಿ ಬರೆಯುತ್ತಿದ್ದ ಪ್ರಬಂಧಗಳಿಗೆ ಬರಬೇಕಾದ ಹಣವನ್ನು ನಮಗೆ ಕೂಡಲೇ ತಲುಪಿಸುವಂತೆ ಕೋರುತ್ತೇನೆ. ಕೆಲವಾರು ವರ್ಷಗಳಿಂದ ನಾವುಗಳು ಮುಂದುವರೆಸಿಕೊಂಡು ಬರುತ್ತಿರುವಂತಹ ತ್ಯಾಗಗಳನ್ನು ಅತಿಶಯಗೊಳಿಸಿ ಹೇಳುತ್ತಿದ್ದೇವೆಂಬ ಯಾರೂ ನಮ್ಮನ್ನು ಆಪಾದಿಸುವುದಕ್ಕೆ ಆಗುವುದಿಲ್ಲ. ನಮ್ಮ ಭೀಕರ ಪರಿಸ್ಥಿತಿಯನ್ನು ಜನಗಳಿಗೆ ನಾವು ತಿಳಿಸಲೇ ಇಲ್ಲ ಎಂದು ಹೇಳಬಹುದು. ಈ ವಿಷಯದಲ್ಲಿ ನನ್ನ ಪತಿಯವರು ಬಹಳ ಶಾಂತ ಸ್ವಭಾವದವರು, ಸಂಕೋಚ ಸ್ವಭಾವದವರೂ ಆಗಿರುತ್ತಾರೆ. ಅವರು ಹಸಿವಿನಿಂದ ಇರಲು ನರಳುತ್ತಾರೆಯೇ ವಿನಹ ಕೆಲ ದೊಡ್ಡ ವ್ಯಕ್ತಿಗಳ ಹಾಗೆ ಗೌರವ ಭಿಕ್ಷೆ ಬೇಡುವಂತಹ ವ್ಯಕ್ತಿಯಾಗಿರುವುದಿಲ್ಲ. ಹೀಗಿದ್ದರೂ, ಅವರ ಸ್ನೇಹಿತರು, ಗುರುತಿಸುವಂತಹವರು, ಕೇಲೋನ್ ನಗರಕ್ಕೆ ಸೇರಿದವರು. ರಿವ್ಯೂ ಪತ್ರಿಕೆಗೆ ಹೆಚ್ಚಿನ ಸಹಾಯ ನೀಡಬಹುದಾಗಿತ್ತು. ಆ ಪತ್ರಿಕೆಗಾಗಿ ನನ್ನ ಪತಿ ಮಾಡಿದ ತ್ಯಾಗಗಳನ್ನು ಅರ್ಥ ಮಾಡಿಕೊಂಡವರು ಮೊದಲು ಸಹಾಯ ನೀಡಬೇಕಾಗಿತ್ತು. ಆದರೆ ಪತ್ರಿಕೆಯು ವ್ಯವಸ್ಥಾಪಕರ ನಿರ್ಲಕ್ಷ್ಯದ ಮನೋಭಾವದಿಂದ ಪತ್ರಿಕೆಯ ವ್ಯಾಪಾರವೇ ಬಿಡಮೇಲಾಯಿತು. ವ್ಯವಸ್ಥಾಪಕರ ಏಜೆಂಟರ, ಕೇಲೋನ್ ನಗರದವರ ಕಾಲಹರಣದಿಂದಾಗಿ ಪತ್ರಿಕೆ ಅವಸಾನ ಕಾಣಬೇಕಾಯಿತು.

ಇಲ್ಲಿ ನನ್ನ ಪತಿಯು ಜೀವನದ ಸಣ್ಣಪುಟ್ಟ ಅವಶ್ಯಕತೆಗಳನ್ನು ಸಹ ಪೂರೈಸಲಾಗದೆ ತೊಳಲಾಡುತ್ತಿದ್ದಾರೆ. ಈ ಬಿಕ್ಕಟ್ಟಿನ ಪರಿಸ್ಥಿತಿ ಅವರ ಸ್ಥೈರ್ಯವನ್ನೇ ಕುಗ್ಗಿಸಿಬಿಟ್ಟಿತು. ನಿರಂತರವಾದ ಹೋರಾಟಗಳಲ್ಲಿ ದೃಢ ಮನಸ್ಸಿನವರಾಗಿಯೂ ಗಂಭೀರವಾಗಿಯೂ ಇದ್ದ ಅವರ ಸ್ಥೈರ್ಯವನ್ನು ಈ ಬಿಕ್ಕಟ್ಟಿನ ಪರಿಸ್ಥಿತಿ ಅಧೀರರನ್ನಾಗಿಸಿತು.

ಪ್ರೀತಿಯ ವೆಡಮೇಯರ್‌ರವರೇ; ರಿವ್ಯೂ ಪತ್ರಿಕೆಗಾಗಿ ನನ್ನ ಪತಿ ಮಾಡಿದ ತ್ಯಾಗಗಳು ತಮಗೆ ತಿಳಿದ ವಿಷಯ. ಆ ಪತ್ರಿಕೆ ಯಶಸ್ಸು ಸಾಧಿಸದೇ ಇದ್ದ ಕಾಲದಲ್ಲಿ ಅವರು ಸಾವಿರ ಗಟ್ಟಲೆ ಖರ್ಚು ಮಾಡಿ ಪತ್ರಿಕೆಯನ್ನು ತಮ್ಮ ಕೈಗೆ ತೆಗೆದುಕೊಂಡರು. ಪತ್ರಿಕೆಗೆ ಬರಬೇಕಾಗಿದ್ದ ಬಾಕಿಗಳನ್ನು ಕೊಡದೇ ಇದ್ದ ಕೆಲ "ಪ್ರಜಾಪ್ರಭುತ್ವದ ಮೇಧಾವಿ"ಗಳನ್ನು ನಂಬಿ ಮೋಸ ಹೋದರು. ಅದೂ ಅಲ್ಲದೆ ಪತ್ರಿಕೆಯ ರಾಜಕೀಯ ಗೌರವವನ್ನು ಮತ್ತು ಕೇಲೋನ್ ನಗರದ ಗೆಳೆಯರ ಗೌರವವನ್ನು ಕಾಪಾಡಲು ಅವರು ಆ ಪತ್ರಿಕೆಯ ಪೂರ್ಣ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡರು. ತಮ್ಮ ಮುದ್ರಣಾಲಯವನ್ನೂ ಸಹ ಅವರು ಬಿಟ್ಟುಕೊಟ್ಟರು. ತಮ್ಮ ಆದಾಯವನ್ನು ಸಹ ಬಿಟ್ಟುಕೊಟ್ಟರು. ನಾವು ಅಲ್ಲಿಂದ ಹೊರಗೆ ಬಂದಾಗ ಮನೆ ಬಾಡಿಗೆ ಕೊಡಲು, ಪತ್ರಿಕೆಯ ಉಪಸಂಪಾದಕರಿಗೆ ಬಾಕಿ ಸಂಬಳ ಕೊಡಲು ಮತ್ತು ಚಿಲ್ಲರೆ ಖರ್ಚುಗಳಿಗಾಗಿ ಮುನ್ನೂರು ತೇಲರ್ (ಜರ್ಮನಿಯ ಬೆಳ್ಳಿ ನಾಣ್ಯ) ಅಷ್ಟು ಹಣ ಸಾಲ ಮಾಡಬೇಕಾಯಿತು. ನಾವು ಅಲ್ಲಿಂದ ಬರದೇ ಇದ್ದಿದ್ದರೇ ಬಲಾತ್ಕಾರವಾಗಿ ಹೊರಗೆ ತಳ್ಳಲ್ಪಡುತ್ತಿದ್ದೆವು. ಆಗ ನಮಗಾಗಿ ಏನನ್ನೂ ಕೈಯಲ್ಲಿಟ್ಟುಕೊಂಡಿರಲಿಲ್ಲ. ಆಗ ನಮ್ಮಲ್ಲಿ ಉಳಿದಿದ್ದ ಬೆಳ್ಳಿ ಸಾಮಾನುಗಳನ್ನು ಗಿರವಿ ಇಡಲು "ಫ್ರಾಂಕ್‌ಫೋರ್ಟ್" ನಗರಕ್ಕೆ ಕೊಂಡೊಯ್ದೆವು. ಬಟ್ಟೆಬರೆಗಳನ್ನು, ಇತರ ವಸ್ತುಗಳನ್ನು ಜಪ್ತಿಯಾಗಬೇಕಾದ ಅಪಾಯಕಾರಿ ಪರಿಸ್ಥಿತಿ ಇದ್ದುದರಿಂದ ಕೇಲೋನ್ ನಗರದಲ್ಲಿದ್ದ ನಮ್ಮ ಕುರ್ಚಿ, ಮೇಜು, ಮಂಚ, ಅಂತಹ ವಸ್ತುಗಳನ್ನು ಮಾರಾಟ ಮಾಡಿದೆವು. ನನ್ನ ಪತಿ ಕ್ರಾಂತಿಯ ವಿರುದ್ಧ ಇದ್ದ ಪರಿಸ್ಥಿತಿಯನ್ನು ನೋಡಲು ಪ್ಯಾರಿಸ್ ನಗರಕ್ಕೆ ಹೋದರು. ನಾನು, ನನ್ನ ಮೂವರು ಮಕ್ಕಳು ಸಹ ಜೊತೆಯಲ್ಲಿ ಹೋದೆವು. ನಾವು ಅಲ್ಲಿ ನೆಲೆಗೊಳ್ಳುವ ಮುನ್ನವೇ ಫ್ರೆಂಚ್ ಸರ್ಕಾರವು ನಮ್ಮನ್ನು ಅಲ್ಲಿಂದ ಗಡಿಪಾರು ಮಾಡಲು ಆಜ್ಞೆ ಮಾಡಿತು. ಅದರಿಂದಾಗಿ ಮತ್ತೆ ಅವರೊಡನೆ ಸಮುದ್ರ ದಾಟಿ ಬರಬೇಕಾಯಿತು. ಒಂದು ತಿಂಗಳನಂತರ ನಮ್ಮ ನಾಲ್ಕನೇ ಮಗು ಹುಟ್ಟಿತು. ಮೊದಲ ಮೂರು ಮಕ್ಕಳು ಇರುವಾಗ ಈ ನಾಲ್ಕನೆಯ ಮಗು ಹುಟ್ಟಿದ ಪರಿಸ್ಥಿತಿಯನ್ನು ನೋಡಬೇಕಾಗಿದ್ದರೆ ಲಂಡನ್ ನಗರದಲ್ಲಿದ್ದ ಪರಿಸ್ಥಿತಿಗಳನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಮನೆಯ ಬಾಡಿಗೆಗೆಂದೇ 42 ತೇಲರು ಹಣ ಕೊಡಬೇಕಿತ್ತು, ಆಗ ನಮಗೆ ದೊರಕುತ್ತಿದ್ದ ಅಲ್ಪ ಆದಾಯದಿಂದ ಹೇಗೋ ಕಾಲವನ್ನು ಕಳೆಯುತ್ತಿದ್ದೆವು. ಆದರೆ "ರಿವ್ಯೂ" ಪತ್ರಿಕೆಯ ಪ್ರಕಟಣೆ ಆರಂಭವಾಗಿ ನಮ್ಮಲ್ಲಿದ್ದ ಅಲ್ಪಸ್ವಲ್ಪ ಆದಾಯವೂ ಕರಗಿಹೋಯಿತು. ನಮಗೆ ಒಪ್ಪಂದದ ಪ್ರಕಾರ ಹಣ ಕೊಡಬೇಕಾದವರು ಕೊಡದೇ ಹೋದರು. ಕೆಲವರು ಕಂತುಗಳ ರೂಪದಲ್ಲಿ ಕೊಡಲು ಪ್ರಾರಂಭಿಸಿದರು. ಇದರಿಂದಾಗಿ ನಮ್ಮನ್ನು ಇನ್ನಷ್ಟು ಭೀಕರ ಪರಿಸ್ಥಿತಿಗೆ ತಳ್ಳಿತು.

> ಕಾರ್ಲ್‌ಮಾರ್ಕ್ಸ್‌ರ ಜೀವನ ಸಂಗಾತಿಯಾಗಿದ್ದ ಜೆನ್ನಿ ಮಾರ್ಕ್ಸ್‌ರವರು ತಮ್ಮ ಆತ್ಮೀಯ ಗೆಳೆಯರೊಬ್ಬರಿಗೆ 1857ರಲ್ಲಿ ಬರೆದ ಕಾಗದದ ಕನ್ನಡಾನುವಾದವನ್ನು ಇಲ್ಲಿ ಕೊಡುತ್ತಿದ್ದೇವೆ. ಕಾರ್ಲ್‌ಮಾರ್ಕ್ಸ್‌ರವರು ತಮ್ಮ ವೈಯುಕ್ತಿಕ ಜೀವನದ ದುರ್ಭರ ಸ್ಥಿತಿಗಳ ಕುರಿತಾಗಿ ಏನನ್ನೂ ಹೇಳದೆ ಹೋಗಿದ್ದರೂ ಕೂಡ ಅವರ ಪತ್ನಿ ಜೆನ್ನಿಮಾರ್ಕ್ಸ್‌ರವರು ತಮ್ಮ ಆತ್ಮೀಯ ಗೆಳೆಯರೊಬ್ಬರಿಗೆ ಬರೆದಿರುವ ಈ ಕಾಗದ ಮಾರ್ಕ್ಸ್‌ರ ವೈಯುಕ್ತಿಕ ಬದುಕನ್ನು ಅತ್ಯಂತ ಸೂಕ್ಷ್ಮವಾಗಿ ಬಯಲುಗೊಳಿಸುತ್ತದೆ.
>
> — ಸಂ.

ಈ ರೀತಿಯಾದ ದುಃಖಕರವಾದ ಜೀವನದಲ್ಲಿನ ಒಂದೇ ಒಂದು ದಿನವನ್ನು ಮಾತ್ರ ತಮಗೆ ವಿವರಿಸುತ್ತೇನೆ. ಅಷ್ಟರಿಂದಲೇ ನಾವು ಯಾವ ಬಗೆಯ ಜೀವನವನ್ನು ನಡೆಸುತ್ತಿದ್ದೇವೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬಹುದು. ಇಲ್ಲಿ ಹಣ ಪಡೆದು ಹಾಲುಕೊಡುವ ದಾಯಂದಿರು, ಹೆಚ್ಚಿನ ಹಣ ಕೇಳುತ್ತಿದ್ದಾರೆ. ಆದ್ದರಿಂದ ನನ್ನ ಮಗುವಿಗೆ ನನ್ನ ಹಾಲನ್ನೇ ಕೊಡಲು ತೀರ್ಮಾನಿಸದ್ದೇನೆ. ಆದರೆ ನಾನು ತೀವ್ರವಾದ ಎದೆ ನೋವಿನಿಂದ ನರಳುತ್ತಿದ್ದರೂ ಸಹ ಈ ತೀರ್ಮಾನಕ್ಕೆ ಬಂದೆನು. ಈ ಕಾರಣದಿಂದ ನನ್ನ ಮಗುವಿಗೆ ಅದೆಷ್ಟು ನೋವಾಗಿದೆಯೋ! ಅವನು ಯಾವಾಗಲೂ ಅಳುತ್ತಲೇ ಇರುತ್ತಾನೆ. ಹಗಲು ರಾತ್ರಿ ನೋವಿನಿಂದ ಅಳುತ್ತಲೇ ಇರುತ್ತಾನೆ. ಯಾವುದೋ ಸಮಯದಲ್ಲಿ ಸ್ವಲ್ಪ ಹೊತ್ತು ನಿದ್ರಿಸುತ್ತಾನೆ. ಅವನು ಹುಟ್ಟಿದಾಗಿನಿಂದ ಒಂದು ರಾತ್ರಿಯೂ ಸಹ ನೆಮ್ಮದಿಯಿಂದ ನಿದ್ರಿಸಿಲ್ಲ. ಕೆಲವು ದಿನಗಳಿಂದ ಅವನು ಮೂರ್ಛೆ ರೋಗದಿಂದ ನರಳುತ್ತಿದ್ದ. ಯಾವಾಗಲೂ ಜೀವ-ಮರಣದ ಮಧ್ಯೆ ತೂಗುಯ್ಯಾಲೆಯಂತೆ ತೂಗಾಡುತ್ತಲೆ ಇದ್ದಾನೆ. ತನ್ನ ನೋವಿನಿಂದಾಗಿ ಅವನು ಕೆಲವೊಮ್ಮೆ ನನ್ನ ಎದೆಯನ್ನು ಸಹ ಕಚ್ಚಿ ಬಿಡುತ್ತಾನೆ. ಅವನ ಚಿಕ್ಕ ಬಾಯಿಯಲ್ಲಿ ರಕ್ತತುಂಬಿರುತ್ತದೆ. ಒಂದು ದಿನ ನನ್ನ ಮಗುವಿಗೆ ಹಾಲು ಕುಡಿಸುತ್ತಿದ್ದ ಸಮಯದಲ್ಲಿ ನಮ್ಮ ಮನೆಯ ಯಜಮಾನಿ ಬಂದಳು. ನಾವು ಆ ಯಜಮಾನಿಗೆ ಚಳಿಗಾಲದ ಮನೆಯ ಬಾಡಿಗೆ 250 ತೇಲರ್ ಹಣ ಕೊಟ್ಟೆವು. ಇನ್ನು ಮುಂದೆ ಆ ಮನೆಯ ಯಜಮಾನಿಗೆ ಕೊಡುವ ಬದಲು ಮನೆಯ ಸ್ವಂತದವರಿಗೆ ನೇರವಾಗಿ ಕೊಡಲು ತೀರ್ಮಾನಿಸಿದೆವು. ಆಕೆ, ಮನೆಯ ಯಜಮಾನರಿಂದ ಹೆಚ್ಚು ಸಾಲ ತೆಗೆದುಕೊಂಡಿದ್ದಳು. ಆದುದರಿಂದ ಆಕೆಯ ವಿರುದ್ಧ ಕೋರ್ಟ್ ವಾರಂಟ್ ಸಹ ಮನೆಯ ಯಜಮಾನ ತಂದಿದ್ದ. ಅದೆ ಸಂದರ್ಭದಲ್ಲಿ ಈಕೆ ನಮ್ಮನ್ನು 5 ಪೌಂಡ್ ಹೆಚ್ಚು ಬಾಡಿಗೆಯನ್ನು ಕೊಡುವಂತೆಯೂ ಬೆದರಿಸುತ್ತಿದ್ದಳು. ಆ ಸಮಯದಲ್ಲಿ ನಮ್ಮಲ್ಲಿ ಒಂದು ಬಿಡಿಗಾಸು ಇರಲಿಲ್ಲ. ಕೋರ್ಟು ಸಿಬ್ಬಂದಿಗಳು ಮನೆಯೊಳಗೆ ನುಗ್ಗಿ ಸಾಮಾನು ಸರಂಜಾಮುಗಳನ್ನು ಕಿತ್ತುಕೊಂಡರು. ನಮ್ಮ ಮಗುವಿನ ತೊಟ್ಟಿಲು, ಮಕ್ಕಳಾಡುತ್ತಿದ್ದ ಬೊಂಬೆಗಳನ್ನು ಸಹ ಬಿಡಲಿಲ್ಲ. ಆ ಮಕ್ಕಳು ಇವುಗಳನ್ನೆಲ್ಲಾ ಬಿಕ್ಕಿಬಿಕ್ಕಿ ಅಳುತ್ತ ನೋಡುತ್ತ ನಿಂತುಬಿಟ್ಟರು. ಎರಡು ಗಂಟೆಯೊಳಗಾಗಿ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕೆಂದು ಭಯಪಡಿಸಿದರು. ಹಾಗೆ ಅವರು ಮಾಡದಿದ್ದರೆ ಎದೆ ನೋವಿನಿಂದ ಬಳಲುತ್ತಿದ್ದ ನಾನು, ಚಳಿಯಲ್ಲಿನಡುಗುತ್ತಿದ್ದ ನನ್ನ ಮಕ್ಕಳು ಬಯಲಿನಲ್ಲಿಯೇ ಮಲಗಬೇಕಾಗಿತ್ತು. ಇಂಥ ಭೀಕರ ಪರಿಸ್ಥಿತಿಯಲ್ಲಿ ನಮಗೆ ಸಹಕಾರ ಮಾಡುವ ಉದ್ದೇಶದಿಂದ ನಮ್ಮ ಗೆಳೆಯರಲ್ಲಿ ಒಬ್ಬರಾದ ಶ್ರೀ "ಸ್ಕ್ರಾಮ್" ರವರು ಹುಡುಕಿಕೊಂಡು ಕುದುರೆಗಾಡಿಯಲ್ಲಿ ನಗರಕ್ಕೆ ಬರುತ್ತಿರುವಾಗ, ಕುದುರೆಗಳು ಅವರ ಹಿಡಿತಕ್ಕೆ ಸಿಗದೇ ಹೋದುದರಿಂದ ಅವರು ಕೆಳಕ್ಕೆ ಧುಮುಕಿಬಿಟ್ಟರು. ಅದರಿಂದಾಗಿ ಅವರ ಮೈಕೈಗೆಲ್ಲಾ ಗಾಯಗಳಾದವು. ಅವರು ರಕ್ತಮಯದೊಡನೆ ಬಂದರು. ಆ ಸಮಯದಲ್ಲಿ ನಾನು ಚಳಿಯಲ್ಲಿ ನಡುಗುತ್ತ ಮಕ್ಕಳೊಡನೆ ಕುಳಿತು ಅಳುತ್ತಿದ್ದೆ.

ಮರುದಿನ ನಾವು ಆ ಮನೆಯನ್ನು ಕಾಲಿ ಮಾಡಲೇಬೇಕಿತ್ತು. ಹೊರಗಡೆ ಚಳಿ, ಮಳೆ ಹೇಳಲು ಸಾಧ್ಯವಿರಲಿಲ್ಲ! ಎಲ್ಲವೂ ಶೂನ್ಯಮಯ! ನನ್ನ ಪತಿ ಹೊಸ ಮನೆಯೊಂದನ್ನು ಹುಡುಕಲು ಹೋಗಿದ್ದರು. ಆದರೆ ನಮಗೆ ನಾಲ್ಕು ಮಕ್ಕಳು ಎಂದು ಕೇಳಿದ ಕೂಡಲೆ ನಮಗೆ ಮನೆಯನ್ನು ಕೊಡಲು ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಒಬ್ಬ ಸ್ನೇಹಿತರ ಸಹಾಯದಿಂದ ಒಂದು ಹೊಸ ಮನೆಗೆ ಹೋಗಿ ಸೇರಿದೆವು. ಔಷಧಿ ಅಂಗಡಿಯವನಿಗೂ ರೊಟ್ಟಿಯಂಗಡಿಯವನಿಗೂ, ಮಾಂಸದಂಗಡಿಯವನಿಗೂ, ಹಾಲಿನವನಿಗೂ, ಕೊಡಬೇಕಾಗಿದ್ದ ಸಾಲಕ್ಕಾಗಿ, ನಮ್ಮ ಹಾಸಿಗೆ ಮಂಚಗಳನ್ನೂ ಕೂಡ ಮಾರಾಟ ಮಾಡಿಬಿಟ್ಟೆವು. ಇವರೆಲ್ಲರೂ, ನಮ್ಮ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಅರಿತು, ಒಬ್ಬೊಬ್ಬರಾಗಿ ಬಂದು ನಮ್ಮನ್ನು ಮುತ್ತಿಗೆ ಹಾಕಿದರು. ನಾವು ಮಾರಾಟ ಮಾಡಿದ ಹಾಸಿಗೆ ಮಂಚಗಳನ್ನು ಗಾಡಿಯ ಮೇಲೆ ಏರಿಸಿದರು. ಆ ವೇಳೆ ಸೂರ್ಯ ಅಸ್ತಮಯವಾಗುತ್ತಿದ್ದ, ಕತ್ತಲೆ ಆವರಿಸತೊಡಗಿತು. ಕೂಡಲೆ ನಮ್ಮ ಹಳೆಮನೆಯ ಯಜಮಾನರು ಇಬ್ಬರು ಪೋಲಿಸ್‌ರೊಡನೆ ಅಲ್ಲಿಗೆ ಬಂದರು. ನಾವು ಇಂಗ್ಲೆಂಡ್‌ನ ಕಾಯಿದೆಯನ್ನು ಮೀರಿದ್ದವಂತೆ! ನಮ್ಮ ವಸ್ತುಗಳ ಜೊತೆಯಲ್ಲಿ ಅವರ ಕೆಲ ಸ್ವಂತ ವಸ್ತುಗಳನ್ನೂ ಸಹ ಸೇರಿಸಿಕೊಂಡಿದ್ದವಂತೆ! ನಾವು ಹೊರದೇಶಕ್ಕೆ ಓಡಿಹೋಗಲು ನಿರ್ಧರಿಸಿದ್ದೇವಂತೆ, ತಕ್ಷಣವೇ ಐದು ನಿಮಿಷದಲ್ಲಿ ಇನ್ನೂರು ಮುನ್ನೂರು ಮಂದಿ ನಮ್ಮ ಮನೆಯ ಮುಂದೆ ಸೇರಿಬಿಟ್ಟರು. ನಾವು ಮಾರಾಟ ಮಾಡಿದ ವಸ್ತುಗಳೆಲ್ಲ ಮತ್ತೆ ಹಿಂದಕ್ಕೆ ತಂದರು. ಮರುದಿನ ಬೆಳಗಾಗುವವರೆಗೂ ಆ ವಸ್ತುಗಳನ್ನು ಕೊಂಡುಕೊಂಡವನಿಗೆ ಅವುಗಳನ್ನು ಒಪ್ಪಿಸಲಾಗಲಿಲ್ಲ. ನಮ್ಮ ವಸ್ತುಗಳನ್ನು ಮಾರಾಟ ಮಾಡಿಬಂದ ಹಣದಲ್ಲಿ ನಮ್ಮ ಸಾಲಗಳನ್ನೆಲ್ಲ ತೀರಿಸಿಬಿಟ್ಟಿದ್ದೆವು. ನಂತರ ಮಕ್ಕಳೊಡನೆ ನಾವು ಜರ್ಮನ್ ಹೋಟಲ್‌ನಲ್ಲಿರುವ (ನಂಬರ್ 1, ಲೀಸೆಸ್ಟರ್ ರಸ್ತೆ, ಲೀಸ್ಟೆಸ್ಟರ್ ವೃತ್ತ) ಎರಡು ಚಿಕ್ಕ ಕೊಠಡಿಗೆ ಬಂದು ಸೇರಿದೆವು. ಇಲ್ಲಿ ಬಾಡಿಗೆ ವಾರಕ್ಕೆ 5 ಪೌಂಡುಗಳು. ನಮ್ಮನ್ನು ಪ್ರಪ್ರಥಮವಾಗಿ ಮನುಷ್ಯ ಜೀವಿಗಳೆಂದು ಭಾವಿಸಿದ ಸ್ಥಳ ಇದೊಂದೆ.

(8ನೇ ಪುಟ ನೋಡಿ)

ಮಾರ್ಕ್ಸ್ ಮರಣ ಶತಾಬ್ಧಿ ಲೇಖನ ಮಾಲೆ

ಲೇಖನ—6

ಸಾಮಾಜಿಕ ಬದಲಾವಣೆಯ ಮಾರ್ಕ್ಸ್‌ವಾದೀ ಸಿದ್ಧಾಂತದಲ್ಲಿ

ಕಳೆದ ವಾರ ಪ್ರಕಟವಾದ ಈ ಲೇಖನದ ಆರಂಭಿಕ ಭಾಗದಲ್ಲಿ ಲೇಖಕರು ಮಾರ್ಕ್ಸ್ ಮತ್ತು ಎಂಗೆಲ್ಸ್ ಮಾನವ ಜೀವನದ ಯಾವ ಅಂಶವನ್ನೂ ಮರೆಯದೆ, ಅವೆಲ್ಲವುಗಳ ನಡುವೆ ಆರ್ಥಿಕ ಕಾರಣದ ನಿರ್ಣಾಯಕ ಪ್ರಭಾವವನ್ನು ತಮ್ಮ ಬರಹಗಳ ಮೂಲಕ ಹೇಗೆ ತೋರಿಸಿಕೊಟ್ಟಿದ್ದಾರೆ ಎಂಬುದನ್ನು, ನ್ಯಾಯಶಾಸ್ತ್ರದಲ್ಲಿ ಅದು ಹೇಗೆ ವ್ಯಕ್ತವಾಗಿದೆ ಎಂಬುದನ್ನೂ ವಿವರಿಸಿದ್ದರು.

ಇಲ್ಲಿ ಪ್ರಕಟವಾಗುತ್ತಿರುವ ಎರಡನೇ ಕಂತಿನಲ್ಲಿ ಅದನ್ನೇ ಮುಂದುವರಿಸಿ ಕಲೆ ತತ್ವಶಾಸ್ತ್ರ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲೂ ಆರ್ಥಿಕಾಂಶ ಹೇಗೆ ನಿರ್ಣಾಯಕವಾಗುತ್ತದೆ ಯೆಂದು ಲೇಖಕರು ಪರಿಶೀಲಿಸಿದ್ದಾರೆ ಮತ್ತು ಇದರ ಸಹಾಯದಿಂದ ಭಾರತೀಯ ಪರಿಸರದಲ್ಲಿ ಊಳಿಗಮಾನ್ಯ ಅಥವಾ ಬಂಡವಾಳಶಾಹೀ ಪೂರ್ವ ತತ್ವಗಳಿಂದ ಮತೀಯತೆ, ಜಾತೀಯತೆ, ಕೋಮುವಾದದ ಐತಿಹಾಸಿಕ ಮೂಲವನ್ನು ವಿವರಿಸಿದ್ದಾರೆ.

(ಕಳೆದ ಸಂಚಿಕೆಯಿಂದ)

ಚಿಂತನಾ ಚಟುವಟಿಕೆಗಳು

ಆರ್ಥಿಕ ಚಟುವಟಿಕೆಗಳಿಗೆ ನೇರವಾಗಿ ಸಂಬಂಧಪಡದ ಮಾನಸಿಕ ಹಾಗೂ ಚಿಂತನಾ ಚಟುವಟಿಕೆಗಳ ತತ್ವವಿಚಾರಗಳು ಇದಕ್ಕಿಂತ ತುಸು ಭಿನ್ನವಾಗಿವೆ. ಅವುಗಳಲ್ಲಿ ಗತಕಾಲದ ಹೊರೆ, ಗತಕಾಲದ ಜ್ಞಾನ ಅಥವಾ ಅಜ್ಞಾನದ ಶೇಖರಣೆ ಜಾಸ್ತಿಯಾಗಿರುತ್ತದೆ. ಗತಕಾಲದ ಶೇಖರಣೆಯನ್ನು ತುಸು ವ್ಯತ್ಯಾಸಗೊಳಿಸುವ ರೂಪದಲ್ಲಿ ಸಮಕಾಲೀನ ಅಂಶ ಅವುಗಳಲ್ಲಿ ಸೇರಿಕೊಳ್ಳುತ್ತದೆ. ಧರ್ಮ, ತತ್ವಶಾಸ್ತ್ರ ಮುಂತಾದವುಗಳಲ್ಲಿ ಇತಿಹಾಸಪೂರ್ವದಾಸ್ತಾನು ಪ್ರಕೃತಿಯ ಬಗ್ಗೆ ಮತ್ತು ಸ್ವತಃ ಮಾನವನ ಇರವಿನ ಬಗ್ಗೆ ತಪ್ಪಾದ ಪರಿಕಲ್ಪನೆಗಳಿರುತ್ತವೆ.

"ಈ ಕ್ಷೇತ್ರಗಳಲ್ಲೂ ಆರ್ಥಿಕ ಅಂಶವೇ ಎಲ್ಲಕ್ಕೂ ಮಿಗಿಲಾದವು ಎಂಬುದು ನನ್ನಮಟ್ಟಿಗಂತೂ ಸಿದ್ಧ ಸಂಗತಿ. ಆದರೆ ಅದು ನಡೆಯುವುದು ಆ ನಿರ್ದಿಷ್ಟ ಕ್ಷೇತ್ರ ತಾನೇ ವಿಧಿಸಿಕೊಂಡ ನಿಯಮಗಳಿಗೆ ಒಳಪಟ್ಟಾಗ ಮಾತ್ರ. ಉದಾಹರಣೆಗೆ, ತತ್ವಶಾಸ್ತ್ರದಲ್ಲಿ, ಪೂರ್ವಿಕರಿಂದ ಪಡೆದ ಸದ್ಯದ ತತ್ವಶಾಸ್ತ್ರೀಯ ಸಾಮಗ್ರಿಗಳ ಮೇಲೆ ಆರ್ಥಿಕ ಕ್ರಿಯೆಗಳ ಮೂಲಕ [ಇವೂ ಸಾಮಾನ್ಯವಾಗಿ ರಾಜಕೀಯ ಇತ್ಯಾದಿ ಸ್ವರೂಪಗಳಲ್ಲೇ ನಡೆಯುತ್ತದೆ.] ಇಲ್ಲಿ ಆರ್ಥಿಕಾಂಶ ಹೊಸದೇನನ್ನೂ ಸೃಷ್ಟಿಸುವುದಿಲ್ಲ. ಆದರೆ ಸದ್ಯ ಅಸ್ತಿತ್ವದಲ್ಲಿರುವ ಚಿಂತನಾ ವ್ಯವಸ್ಥೆ ಹೇಗೆ ವ್ಯತ್ಯಾಸಗೊಳ್ಳಬೇಕು, ಮುಂದೆ ಹೇಗೆ ಬೆಳವಣಿಗೆ ಹೊಂದಬೇಕು ಎಂಬುದನ್ನು ಆರ್ಥಿಕಾಂಶವೇ ನಿರ್ಧರಿಸುತ್ತದೆ. ಅದೂ ಬಹ್ವಂಶ ಪರೋಕ್ಷವಾಗಿಯೇ. ಏಕೆಂದರೆ ತತ್ವಶಾಸ್ತ್ರದ ಮೇಲೆ ಅತ್ಯಂತ ನೇರವಾದ ಪ್ರಭಾವ ಬೀರುವುದು ಅದರ ರಾಜಕೀಯ, ನ್ಯಾಯಶಾಸ್ತ್ರೀಯ ಹಾಗೂ ನೈತಿಕ ಪ್ರತಿಫಲನಗಳು." [ಮಾರ್ಕ್ಸ್–ಎಂಗೆಲ್ಸ್, Selected Correspondence, ಪುಟ 401]

ಕಲೆ ಮತ್ತು ಸಮಾಜ

ಕಲೆಯ ಬೆಳವಣಿಗೆ ಹಾಗೂ ಸಮಾಜದ ಬೆಳವಣಿಗೆಯ ಕುರಿತು ಮಾರ್ಕ್ಸ್ ಹೀಗೆ ಹೇಳುತ್ತಾರೆ—

"ಉದಾಹರಣೆಗೆ ಭೌತವಸ್ತುಗಳ ಉತ್ಪಾದನೆಯ ಬೆಳವಣಿಗೆ ಹಾಗೂ ಕಲೆಯ ನಡುವಿನ ಅಸಮ ಸಂಬಂಧಗಳು...ಬುಡಕಟ್ಟುಗಳಲ್ಲಿ, ಜನಾಂಗಗಳಲ್ಲಿ ವ್ಯಕ್ತಿನಿಷ್ಠವಾಗಿ ಮತ್ತು ವಸ್ತುನಿಷ್ಠವಾಗಿ ಮೈಗೂಡಿಕೊಂಡ ನಿಸರ್ಗದ ಕೆಲವು ಸಂಗತಿಗಳಲ್ಲೇ ಇದರ ಆರಂಭವನ್ನು ಕಾಣಬಹುದು.... ಕಲೆಯ ಅತ್ಯುನ್ನತ ಬೆಳವಣಿಗೆಯ ಕೆಲವು ಅವಧಿಗಳಿಗೂ, ಸಮಾಜದ ಸಾಮಾನ್ಯ ಬೆಳವಣಿಗೆಗೂ ನೇರ ಸಂಬಂಧವಿಲ್ಲ, ಅದೇ ರೀತಿ ಭೌತಿಕ ತಳಪಾಯ ಮತ್ತು ಅದರ ಸಂಘಟನೆಯ ಸ್ಥೂಲ ಸ್ವರೂಪದೊಂದಿಗೂ ನೇರ ಸಂಬಂಧವಿಲ್ಲ ಎಂಬುದು ಸುಪರಿಚಿತ ಸಂಗತಿ. ಆಧುನಿಕ ದೇಶಗಳೊಂದಿಗೆ ಹೋಲಿಸಿದಂತೆ ಗ್ರೀಕರ ಅಥವಾ ಶೇಕ್ಸ್‌ಪಿಯರನ ಉದಾಹರಣೆಯನ್ನೇ ನೋಡಿ.... ಗ್ರೀಕ್ ಕಲೆಗೂ ಅಥವಾ ಶೇಕ್ಸ್‌ಪಿಯರನ ಕಾಲಕ್ಕೂ ನಮ್ಮ ಕಾಲಕ್ಕೂ ಇರುವ ಸಂಬಂಧವನ್ನೇ ತೆಗೆದುಕೊಳ್ಳೋಣ. ಗ್ರೀಕ್ ಪುರಾಣ ಗ್ರೀಕ್ ಕಲೆಯ ಬತ್ತಳಿಕೆ ಮಾತ್ರವಲ್ಲ, ಗ್ರೀಕ್ ಕಲೆ ಉದ್ಭವಗೊಂಡದ್ದೆ ಗ್ರೀಕ್ ಪುರಾಣದಿಂದ ಎಂಬುದು ಎಲ್ಲರಿಗೂ ತಿಳಿದಿದೆ. ಗ್ರೀಕ್ ಕಲ್ಪನೆಯನ್ನು ಗ್ರೀಕ್ ಕಲೆಯನ್ನು ರೂಪಿಸಿದ ನಿಸರ್ಗದ ದೃಷ್ಟಿ ಮತ್ತು ಸಾಮಾಜಿಕ ಸಂಬಂಧಗಳ ದೃಷ್ಟಿಕೋಣ ಸ್ವಯಂಚಾಲಿತ ಯಂತ್ರಗಳ, ರೈಲ್ವೇಗಳ, ಸಂಚಾರ ಸಾಧನಗಳ, ವಿದ್ಯುತ್ ಟೆಲಿಗ್ರಾಫ್‌ಗಳ ಯುಗದಲ್ಲಿ ಸಾಧ್ಯವೇ? ಪುರಾಣ ಶಾಸ್ತ್ರಗಳೆಲ್ಲಾ ನಿಸರ್ಗದ ಶಕ್ತಿಗಳ ಮೇಲೆ ಹತೋಟಿ ಪಡೆಯುವುದು, ಪ್ರಾಬಲ್ಯ ಮೆರೆಸುವುದು ಹಾಗೂ ಅವನ್ನು ರೂಪಿಸುವುದು ಕಲ್ಪನೆಗಳಲ್ಲಿ ಮತ್ತು ಕಲ್ಪನೆಗಳ ಮೂಲಕ. ಆದ್ದರಿಂದ ಮನುಷ್ಯ ನಿಸರ್ಗದ ಆ ಶಕ್ತಿಗಳ ಮೇಲೆ ಹತೋಟಿ ಸಾಧಿಸಿ ತಕ್ಷಣ ಅವು ಮಾಯವಾಗುತ್ತವೆ....ಗ್ರೀಕ್ ಕಲೆಗೆ ಗ್ರೀಕ್ ಪುರಾಣ ಶಾಸ್ತ್ರದ ಅಸ್ತಿತ್ವ ಅತ್ಯಗತ್ಯ. ಅಂದರೆ ಆ ನಿಸರ್ಗ ಹಾಗೂ ಸಮಾಜದ ಸ್ವರೂಪ ಕೂಡಾ ಜನಪ್ರಿಯ ಕಲ್ಪನೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ಕಲಾತ್ಮಕ ರೀತಿಯಲ್ಲೇ ಮೂಡಿರುತ್ತದೆ. ಇದೇ ಆ ಕಲೆಯ ಸಾಮಗ್ರಿ. ಆದರೆ ಮನಸ್ಸಿಗೆ ತೋಚಿದ ಯಾವುದೇ ಪುರಾಣ ಶಾಸ್ತ್ರ ಆ ರೀತಿಯ ಸಾಮಗ್ರಿಯಾಗಲು ಸಾಧ್ಯವಿಲ್ಲ. ಈಜಿಪ್ಟ್‌ನ ಪುರಾಣ ಶಾಸ್ತ್ರಗಳ ಮಣ್ಣಿನಿಂದ ಅಥವಾ ಗರ್ಭದಿಂದ ಗ್ರೀಕ್ ಕಲೆ ಎಂದೂ ಹುಟ್ಟಲಾರದು." [Contribution to the Critique of Political Economyಯೊಂದಿಗೆ ಪ್ರಕಟವಾದ ಟಿಪ್ಪಣಿಗಳಿಂದ-ನ್ಯೂಯಾರ್ಕ್ 1904, ಪುಟ 309–311]

ಧಾರ್ಮಿಕ ತತ್ವದ ವರ್ಗ ಕೈಂಕರ್ಯ

ಆರ್ಥಿಕ ಚಟುವಟಿಕೆಯಿಂದ ಬಹಳ ದೂರವಿರುವ ತತ್ವ ಹಲವು ಚಾರಿತ್ರಿಕ ಕಾಲಘಟ್ಟಗಳನ್ನು ದಾಟಿ ಬದುಕುಳಿದಿದೆ. ಆದರೆ ಅದು ಭಿನ್ನ-ಭಿನ್ನ ಕಾಲದಲ್ಲಿ ಭಿನ್ನ-ಭಿನ್ನ ವರ್ಗ ಯಜಮಾನರ ಕೈಂಕರ್ಯ ಮಾಡಿದೆ. ಧರ್ಮ ಹುಟ್ಟಿದ್ದು ಆದಿಕಾಲದಲ್ಲಿ. ಆದರೆ ಯಾವುದೇ ತಾತ್ವಿಕ ಅಂಶ ಒಮ್ಮೆ ಉದ್ಭವಗೊಂಡ ಮೇಲೆ ನಿರ್ದಿಷ್ಟ ಪರಿಕಲ್ಪನೆ ಮೂಡಿಸಿದ ಸಾಮಗ್ರಿಗಳೊಂದಿಗೆ ಬೆಳೆಯುತ್ತದೆ ಹಾಗೂ ಅದನ್ನು ಮತ್ತಷ್ಟು ಅಭಿವೃದ್ಧಿಗೊಳಿಸುತ್ತದೆ. ಇಲ್ಲವಾದರೆ ಅದು ಒಂದು ತತ್ವವಾಗಿ ಉಳಿಯುವುದಿಲ್ಲ. ಅಂದರೆ ಇತರ ಸ್ವತಂತ್ರ ಅಸ್ತಿತ್ವವುಳ್ಳ, ಕೇವಲ ತನ್ನದೇ ಆದ ನಿಯಮಗಳಿಗನುಗುಣವಾಗಿ ಸ್ವತಂತ್ರವಾಗಿ ಬೆಳೆಯುವ ವಸ್ತುವಿನಂತೆ ಚಿಂತನೆಯು ವೃತ್ತಿಯಾಗುವುದಿಲ್ಲ.

[ಎಂಗೆಲ್ಸ್–'ಫೊಯರ್‌ಬಾಹ್'] ಕ್ರಿಶ್ಚಿಯನ್ ಧರ್ಮ ಊಳಿಗಮಾನ್ಯ ವ್ಯವಸ್ಥೆಯ ಧಾರ್ಮಿಕ ಪಡಿರೂಪವಾಗಿ ಬೆಳೆಯಿತು ಎಂದು ಎಂಗೆಲ್ಸ್ ಹೇಳುತ್ತಾರೆ. ಮಧ್ಯಮ ಯುಗದಲ್ಲಿ ಅದರ ಅಭಿವೃದ್ಧಿಯೊಂದಿಗೆ ಚರ್ಚ್ ಅದಕ್ಕನುಗುಣವಾದ ಊಳಿಗಮಾನ್ಯ ಪುರೋಹಿತ ಶ್ರೇಣಿಯನ್ನು ಬೆಳೆಸಿತು. ಬರ್ಗರ್ (ಪಟ್ಟಣಿಗ ಅಥವಾ ಮಧ್ಯಮ ವರ್ಗದವ)ನ ಉದಯದೊಂದಿಗೆ ಕ್ಯಾಥೋಲಿಕ್ ಪಂಥಕ್ಕೆ ಪ್ರಾಟೆಸ್ಟೆಂಟ್ ವಿರೋಧ ಬೆಳೆಯಿತು. ಇದರೊಂದಿಗೆ ಪ್ಲೆಬಿಯನ್ (ಸಾಮಾನ್ಯ ಜನರ) ಕ್ರಾಂತಿಕಾರಿ ವಿರೋಧ ಕೂಡಾ ಬೆಳೆಯಿತು. ಜನಸಾಮಾನ್ಯರ ಭಾವನೆಗಳಲ್ಲಿ ಬೇರೆಲ್ಲಾ ಬಿಟ್ಟು ಕೇವಲ ಧರ್ಮವನ್ನೇ ಹೊಕ್ಕಿಸಲಾಯಿತು. ಆದ್ದರಿಂದ ಒಂದು ರಭಸಪೂರ್ಣ ಆಂದೋಲನವನ್ನು ಹುಟ್ಟುಹಾಕಲು ಅವರು ತಮ್ಮ ಹಿತಾಸಕ್ತಿಗಳನ್ನು ಧಾರ್ಮಿಕ ವೇಷದಲ್ಲಿ ಮಂಡಿಸಬೇಕಾಯಿತು. ಪ್ರಾಟೆಸ್ಟೆಂಟ್ ವಾದವನ್ನು ಕೊಲ್ಲುವುದು ಸಾಧ್ಯವಾಗಲಿಲ್ಲ. ಯಾಕೆಂದರೆ ಅದು ಉದೀಯಮಾನ ಬರ್ಗರ್ (ಮಧ್ಯಮ ವರ್ಗ) ಹಿತಾಸಕ್ತಿಗಳ ಪ್ರತಿನಿಧಿಯಾಗಿತ್ತು.

ಧಾರ್ಮಿಕ ತತ್ವ ಮುಂದುವರಿಯಿತು. ಆದರೆ ಅದರ ಹೊಸ ಆವೃತ್ತಿ ಹೊಸ ವರ್ಗಹಿತಾಸಕ್ತಿಗಳನ್ನು, ಹೊಸ ಸಮಾಜವೊಂದರ ಹಿತಾಸಕ್ತಿಗಳನ್ನು ಪ್ರತಿಬಿಂಬಿಸಲಾರಂಭಿಸಿತು. ಬದಲಾಗದ ಧರ್ಮ ತನ್ನ ಯಜಮಾನರನ್ನು ಬದಲಿಸಿತು.

ಪೋಪ್ ಹಾಗೂ ಚರ್ಚ್‌ನ ಮಧ್ಯಪ್ರವೇಶ, ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟರ ನಡುವೆ ನಡೆದ ಯುದ್ಧಗಳು, ಕಿರುಕುಳಗಳು ಎಲ್ಲಾ ತಾತ್ವಿಕ ಪ್ರಜ್ಞೆಯ ಮತ್ತು ಸಮಾಜದ ಮೇಲ್ ರಚನೆ ಹೇಗೆ ಕ್ರಿಯಾತ್ಮಕ ಪಾತ್ರ ವಹಿಸುತ್ತವೆ ಎಂಬುದಕ್ಕೆ ಸಾಕ್ಷಿ. ಇದಕ್ಕೊಡ್ಡಿದ ಪ್ರತಿರೋಧ ಕೂಡಾ ಹೊಸ ತತ್ವವಿಚಾರದ, ಹೊಸ ಪ್ರಜ್ಞೆಯ ಕ್ರಿಯಾತ್ಮಕ ಪಾತ್ರವೇನೆಂಬುದನ್ನು ತೋರಿಸಿಕೊಟ್ಟಿತು.

ಭಾರತೀಯ ಪರಿಸರದಲ್ಲಿ

ಪರಿವರ್ತನೆ ಹಾಗೂ ಮುನ್ನಡೆಯನ್ನು ಭಾರತದಲ್ಲಿ ರಾಜಕೀಯ ಪ್ರಯಾಣ ಕೈಗೊಳ್ಳುತ್ತಿದ್ದಾರೆ. ಅಂದರೆ ಭಾರತ ಇತಿಹಾಸದ ಭೌತವಾದೀ ಪರಿಕಲ್ಪನೆಗೊಂದು ಅಪವಾದವೇ? ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ಪರಿಸರ ಭಾರತದ ಮತೀಯತೆ ಕೋಮುವಾದ ಹಾಗೂ ಜಾತಿ ಪ್ರಜ್ಞೆಯನ್ನು ಭೇದಿಸಲಾರದಾಗಿದೆಯೇ?

ಆರಂಭದಲ್ಲೇ ಒಂದು ಸಂಗತಿ ಅರಿತುಕೊಳ್ಳಬೇಕು. ಸಾಂಪ್ರದಾಯಿಕ ಶಕ್ತಿಗಳು ಮತ್ತೆ ಹೊಸದಾಗಿ ಧಾಳಿಯಿಡಲಾರಂಭಿಸಿವೆ ಆದರೂ ಅದನ್ನು ಎದುರಿಸುವ ಇತರ ಶಕ್ತಿಗಳೂ ಇವೆ. ಇನ್ನೂ ಅವು ದುರ್ಬಲವಾಗಿವೆ ಎಂಬುದು ಬೇರೆ ಮಾತು. ಇಲ್ಲಿ ಮೇಲ್ ರಚನೆ [political superstructure] ಹಾಗೂ ಪ್ರಜ್ಞೆ- ಮತೀಯ, ಜಾತೀಯ ಹಾಗೂ ಕೋಮು ಪ್ರಜ್ಞೆ–ಇವೆರಡೂ ಸಕ್ರಿಯವಾಗಿ ವಿರೋಧಿಸುವಂತೆ ಕಾಣುತ್ತಿದೆ. ರಾಷ್ಟ್ರೀಯ ಪ್ರಜ್ಞೆಯನ್ನು ಏಕೀಕರಿಸಿ ಸಾಮ್ರಾಜ್ಯಶಾಹಿಯನ್ನು ಸೋಲಿಸಿದ ಶಕ್ತಿಗಳು ಸ್ವಾಧೀನತೆ ಹಾಗೂ ಸ್ವಾತಂತ್ರ್ಯದ ಮೂರು ದಶಕಗಳಲ್ಲಿ ಹಿಂದೆ ಸರಿಯುತ್ತಿದೆಯೆಂದನಿಸುತ್ತಿದೆ.

ಹೀಗೇಕೆ? ಕಳೆದ ನೂರು ವರ್ಷಗಳಲ್ಲಿ ನಿಸ್ಸಂಶಯವಾಗಿಯೂ ಮಹತ್ವಪೂರ್ಣ ಆರ್ಥಿಕ ಪರಿವರ್ತನೆಗಳಾಗಿವೆ; ಸ್ವಾತಂತ್ರ್ಯಾನಂತರ ಹಲವು ಯೋಜನೆಗಳು ಜಾರಿಯಾಗಿವೆ. ರಾಜಮಹಾರಾಜರುಗಳ ಆಡಳಿತ ಕೊನೆಗೊಂಡಿದೆ. ಶಾಸನಬದ್ಧ ಭೂಮಾಲೀಕತ್ವ ರದ್ದಾಗಿದೆ. ಕೈಗಾರಿಕಾ ಉತ್ಪಾದನೆಯ ಸಾಮರ್ಥ್ಯ ಹೆಚ್ಚಿದೆ. ಹಳ್ಳಿಗಳ ಪ್ರತ್ಯೇಕಭಾವ ಮುರಿದು ಅವೀಗ ಬಂಡವಾಳಶಾಹಿ ಮಾರುಕಟ್ಟೆಯ ಬಿರುಸಿಗೆ ಒಳಗಾಗಿವೆ, ರಸ್ತೆಗಳ ನಿರ್ಮಾಣ, ರೈಲು ಸಾಗಾಣಿಕೆ ಇವನ್ನೆಲ್ಲಾ ಸಾಧ್ಯವಾಗಿಸಿವೆ.

ಆದಾಗ್ಯೂ ಮತೀಯ ಭಾವನೆ, ಕೋಮಿನ ಹಾಗೂ ಜಾತೀಯ ಭಾವನೆ ಹೆಚ್ಚುತ್ತಿರುವಂತೆ ಕಾಣುತ್ತಿದೆ. ಜ್ಯೋತಿಷಿಗಳು, ಹಸ್ತಸಾಮುದ್ರಿಕಕಾರರು, ಸಾಯಿಬಾಬಾಗಳು ಭಾರೀ ವ್ಯಾಪಾರ ಗಿಟ್ಟಿಸುತ್ತಿದ್ದಾರೆ. ಕೇರಳ ಹಾಗೂ ಇತರೆಡೆ ಹೊಸ-ಹೊಸ ದೇವರುಗಳ ಸಂಶೋಧನೆ ನಡೆಯುತ್ತಿದೆ. ಸಾವಿರಾರು ಜನ ಆ ದೇವತೆಗಳ ದರ್ಶನಕ್ಕೆ ಮೈಲುಗಟ್ಟಲೆ

ಎರಡು ಪ್ರಶ್ನೆಗಳನ್ನು ಉತ್ತರಿಸಬೇಕಾಗಿದೆ. ದಮನಕ್ಕೊಳಗಾದ ಜನಸಾಮಾನ್ಯರು, ತಮ್ಮಲ್ಲಿ ಎಲ್ಲರೂ ಸಮಾನವಾಗಿ ಅನುಭವಿಸುತ್ತಿರುವ ನೋವುಗಳು, ಸಂಕಷ್ಟಗಳು ಹೆಚ್ಚುತ್ತಿದ್ದರೂ, ತಮ್ಮ–ತಮ್ಮಲ್ಲೇ ಒಡಕು ಹುಟ್ಟಿಸುವ, ತಮ್ಮ ಹೋರಾಟಗಳನ್ನು ಅಸ್ತವ್ಯಸ್ತಗೊಳಿಸುವ ಪ್ರತಿಗಾಮಿ ಭಾವನೆಗಳಿಗೆ ಏಕೆ ಬಲಿಯಾಗುತ್ತಾರೆ? ಎರಡನೆಯದಾಗಿ, ಈ ಸಾಂಪ್ರದಾಯಿಕ ಶಕ್ತಿಗಳು ಭಾರತದ ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಸರಿಹೊಂದಲಾರದ ಪರಕೀಯ ತತ್ವಗಳಾಗಿರಬಹುದೇ?

ಬೂರ್ಜ್ವಾ ಮುಂದಾಳುತ್ವ ಕಾರಣ

ಮತೀಯ, ಜಾತೀಯ ಹಾಗೂ ಕೋಮುವಾದೀ ತತ್ವಗಳು ಸಮಾಜಗಳಲ್ಲಿ ತೀವ್ರ ಸ್ವರೂಪದ, ಕ್ರಾಂತಿಕಾರೀ ಪರಿವರ್ತನೆ ಎದುರಾದಾಗ ತಮ್ಮ ಶಕ್ತಿ ಕಳಕೊಳ್ಳುತ್ತವೆ. ಯಾಕೆಂದರೆ ಇಂತಹ ಪರಿವರ್ತನೆಗಳು ಈ ತತ್ವಗಳನ್ನು ಪೋಷಿಸುವ, ಆಧರಿಸುವ ತಳಪಾಯವನ್ನೇ ಸಂಪೂರ್ಣವಾಗಿ ನಾಶಗೊಳಿಸುತ್ತವೆ. ಭಾರತದಲ್ಲಿ ಇಂತಹ ಕ್ರಾಂತಿಕಾರಿ ಬದಲಾವಣೆಯೇನೂ ಆಗಿಲ್ಲ. ಇನ್ನೊಂದೆಡೆ ಗ್ರಾಮಾಂತರದಲ್ಲಿ ಕೆಲವು ಬದಲಾವಣೆ ಕಂಡುಬಂದರೂ ಅಲ್ಲಿಯ ಹಳೆಯ ಸಮಾಜ ವ್ಯವಸ್ಥೆಯೊಡನೆ ರಾಜಿ ಮಾಡಿಕೊಳ್ಳಲಾಗಿದೆ.

ಮಳೆಯ ಮರ್ಜಿಯನ್ನವಲಂಬಿಸಿದ ಈಗ ಮಾರುಕಟ್ಟೆಯ ಮರ್ಜಿಯನ್ನೂ

ತತ್ತ್ವ ವಿಚಾರಗಳ ಸ್ಥಾನ

ಬಿ. ಟಿ. ರಣದಿವೆ

ಅವಲಂಬಿಸಿದ ಅಲ್ಪ ಪ್ರಮಾಣದ ಉತ್ಪಾದನೆ, ವ್ಯಾಪಾರಿಗಳ, ಸರಕಾರೀ ವಿಕ್ರಯ ಸಂಸ್ಥೆಗಳ ಅನೀತಿಯುತ ನಡವಳಿಕೆ, ನಿರ್ಗತಿಕರಾದ, ದರಿದ್ರಾವಸ್ಥೆಗಿಳಿದ ರೈತರು ಆಧುನಿಕ ಕೂಲಿ ಮಾರುಕಟ್ಟೆ ಪ್ರವೇಶಿಸಲಾರದ, ತನ್ಮೂಲಕ ತಮ್ಮನ್ನು ಒಂದು ಆಧುನಿಕ ಕಾರ್ಮಿಕ ವರ್ಗವಾಗಿ ಪರಿವರ್ತಿಸಿಕೊಳ್ಳಲಾರದ ದುಃಸ್ಥಿತಿ–ಇವು ಮತೀಯತೆ, ಜಾತೀಯತೆ ಹಾಗೂ ಕೋಮುವಾದದ ಪೋಷಕ ಅಂಶಗಳು.

ಇದರೊಡನೆ ಗ್ರಾಮಾಂತರದಲ್ಲಿ ಉಳಿದು ಬಂದಿರುವ ಊಳಿಗಮಾನ್ಯ, ಅರೆ–ಊಳಿಗಮಾನ್ಯ ಸಾಮಾಜಿಕ ಸಂಬಂಧಗಳು, ಭೂ ಒಡೆತನದ ಸಾಂದ್ರೀಕರಣ, ಗೇಣಿ ಮುರಿಯುವ ಗೇಣಿ ಹೊರೆ, ದುಬಾರಿ ಬಡ್ಡಿ ಸಾಲ, ಜೀತ, ಭೂಹೀನರ ಭೂದಾಹ- ಪ್ರಾಚೀನ ಜಾತಿ ವಿಭಜನೆಯ ನೆರಳಲ್ಲಿ ನಡೆಯುತ್ತಿರುವ ಇವೆಲ್ಲವನ್ನೂ ಸೇರಿಸಿದರೆ ಮತೀಯತೆ, ಜಾತೀಯತೆ ಹಾಗೂ ಕೋಮುವಾದದ ಪೋಷಕ ಕೇಂದ್ರಗಳ ಈ ಚಿತ್ರ ಪೂರ್ಣಗೊಳ್ಳುತ್ತದೆ.

ಅದೇ ವೇಳೆ ಈ ಮತೀಯತೆ, ಕೋಮುವಾದ ನಾವು ಪೂರ್ವಿಕರಿಂದ ಪರಂಪರೆಯಿಂದ ಪಡೆದ ಬಳುವಳಿ ಕೂಡಾ. ಸಾಮ್ರಾಜ್ಯಶಾಹೀ-ವಿರೋಧಿ ರಾಷ್ಟ್ರೀಯ ಆಂದೋಲನ ಇದನ್ನು ಎಂದೂ ಪರಿತ್ಯಜಿಸಲಿಲ್ಲ. ಬದಲಾಗಿ, ಪ್ರತಿಯೊಂದು ಘಟ್ಟದಲ್ಲೂ ಅದರೊಡನೆ ರಾಜಿ ಮಾಡಿಕೊಂಡು ಜನಸಾಮಾನ್ಯರು ಅದರ ಪ್ರತಿಗಾಮಿ ದುಷ್ಟಭಾವಗಳಿಗೆ ಬಲಿಯಾಗುವಂತಾಯಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮುಂದಾಳುತ್ವ ವಹಿಸಿದ್ದ ರಾಷ್ಟ್ರೀಯ ಬೂರ್ಜ್ವಾ ನಾಯಕತ್ವ ಊಳಿಗಮಾನ್ಯ ಶಕ್ತಿಗಳೊಂದಿಗೆ ಪರಸ್ಪರ ಒಪ್ಪಂದ ಮಾಡಿಕೊಂಡುದರ ನೇರ ಪರಿಣಾಮವಿದು.

ಬೂರ್ಜ್ವಾ ವರ್ಗದ ನೇತೃತ್ವದ ಸ್ವಾತಂತ್ರ್ಯ ಆಂದೋಲನ ಮರೆ ಹೊಕ್ಕದ್ದು ಪುನರುತ್ಥಾನವಾದೀ ಭಾವನೆಗಳಿಗೆ – ಪ್ರಾಚೀನೋನ್ಮುಖತೆ, ಧರ್ಮ, ಹಳೆಯ ಸಂಪ್ರದಾಯ, ತತ್ವಶಾಸ್ತ್ರ ಇವುಗಳನ್ನೆ ಓಲೈಸಿದ್ದು.

ಆರ್. ಪಿ. ದತ್ ಈ ಪುನರುತ್ಥಾನವಾದೀ ಕರೆಯನ್ನು ಹೀಗೆ ವರ್ಣಿಸಿದ್ದಾರೆ –

"ಗಬ್ಬು ವಾಸನೆ ಬೀರುವ ಸಾಂಪ್ರದಾಯಿಕ, ನೈತಿಕ ಇತ್ಯಾದಿ ಗೊಂದಲಗಳಿಂದ, ಭ್ರಷ್ಟ ಆಧ್ಯಾತ್ಮಿಕತೆಯಿಂದ ಮಾಯವಾದ ನಾಗರಿಕತೆಯೊಂದರ ಆಸ್ಥಾನ ವೈಭವದ ಮರಣೋತ್ತರ ಪಳೆಯುಳಿಕೆಗಳಿಂದ, ಒಂದು ಆದರ್ಶವಾಗಿ, ದಾರಿದೀಪವಾಗಿ ಎತ್ತಿ ತೋರಿಸಲು ಸಾಧ್ಯವಾಗಬಹುದಾದ ಹಿಂದೂ ಸಂಸ್ಕೃತಿಯ ಶುದ್ಧೀಕೃತ ಹಿಂದೂ ಸಂಸ್ಕೃತಿಯ ಸುವರ್ಣ ಕನಸೊಂದನ್ನು ಕಲ್ಪಿಸಿ ನಿರ್ಮಿಸಲು ಪ್ರಯತ್ನಿಸಿದರು. ಭಾರತದ ಬೂರ್ಜ್ವಾ ವರ್ಗವನ್ನು, ಬುದ್ಧಿಜೀವಿಗಳನ್ನು ಗೆದ್ದುಕೊಳ್ಳುತ್ತಿರುವ ಬ್ರಿಟಿಶರ ಬೂರ್ಜ್ವಾ ಸಂಸ್ಕೃತಿ ಹಾಗೂ ತತ್ವಗಳ ಭಾರೀ ಪ್ರವಾಹವನ್ನು ಕಂಡ ಅವರು ಅದರ ವಿರುದ್ಧ ತಮ್ಮ ಈ ಪುನರ್ರಚಿತ ಹಿಂದೂ ತತ್ವದ ದುರ್ಬಲ ರಕ್ಷಾಕವಚವನ್ನು ಅಡ್ಡ ಹಿಡಿಯಲು ಪ್ರಯತ್ನಿಸಿದರು. ಆದರೆ ವಾಸ್ತವ ಜೀವನದಲ್ಲಿ ಆ ತತ್ವದ ಅಸ್ತಿತ್ವಕ್ಕೆ ಯಾವ ಸ್ವಾಭಾವಿಕ ಆಧಾರವೂ ಈಗ ಉಳಿದಿರಲಿಲ್ಲ. ಈ ಹೊಸ ಪರಮವೇದದ ಕಡುಭಕ್ತರು ಎಲ್ಲಾ ಸಾಮಾಜಿಕ ಹಾಗೂ ವೈಜ್ಞಾನಿಕ ಅಭಿವೃದ್ಧಿಯನ್ನೂ ವಿಜೇತರ ಸಂಸ್ಕೃತಿಯನ್ನು ಖಂಡಿಸಿದರು. ಮೂಲ ಗುಂಪಾದ ಪರಂಪರೆಯ ಪ್ರತಿಯೊಂದು ಅಂಶವನ್ನು ಅದು ಆ ಸಂಪ್ರದಾಯದ ದುರುಪಯೋಗವೇ ಆಗಿರಲಿ, ನಿರ್ದಿಷ್ಟ ವಿಭಾಗ ಮಾತ್ರ ಅನುಭವಿಸುತ್ತಿದ್ದ ಸೀಮಿತ ವಿಶೇಷ ಪ್ರಯೋಜನಗಳೇ ಆಗಿರಲಿ ಅಥವಾ ಅಂಧಶ್ರದ್ಧೆಯೇ ಆಗಿರಲಿ, ಎಲ್ಲವನ್ನೂ ಗೌರವದಿಂದ, ಶ್ರದ್ಧೆಯಿಂದ ಕಾಣಲಾರಂಭಿಸಿದರು."

ಬೆನ್ನುಬಿಡದ ದುಃಸ್ವಪ್ನ

ಈ ಮೇಲಿನ ತಿಳುವಳಿಕೆ ತುಸು ಏಕಪಕ್ಷೀಯವೆನ್ನಬಹುದು. ಯಾಕೆಂದರೆ ಗತಕಾಲದ ನಾಗರಿಕತೆಯೆಡೆಗೆ ಮುಖ ತಿರುವಿದ್ದು ಒಂದು ಘಟ್ಟದವರೆಗೆ ರಾಷ್ಟ್ರೀಯ ಜಾಗೃತಿಯ ಭಾಗವೇ ಆಗಿತ್ತು. ಪರಾಜಿತರಾದ ಮತ್ತು ಗುಲಾಮರನ್ನಾಗಿಸಿದ ಜನತೆಯೊಂದರ ಆತ್ಮಗೌರವವನ್ನು ಬಡಿದೆಬ್ಬಿಸಲು ಅದನ್ನು ಉಪಯೋಗಿಸಲಾಯಿತು. ಕಾರ್ಲ್ ಮಾರ್ಕ್ಸ್ ಗಮನಿಸಿದಂತೆ–

"ಸತ್ತ ಪೀಳಿಗೆಗಳ ಪರಂಪರೆಯೆಲ್ಲಾ ದುಃಸ್ವಪ್ನದಂತೆ ಜೀವಂತ ಪೀಳಿಗೆಗಳ ಮಿದುಳನ್ನು ಆವರಿಸಿರುತ್ತದೆ. ತಮ್ಮನ್ನು ಹಾಗೂ ಇತರರನ್ನು ಕ್ರಾಂತಿಕಾರಗೊಳಿಸುವಲ್ಲಿ ಮಗ್ನರಾಗಿರುವಂತೆ ಕಂಡು ಬರುವಾಗಲೇ, ಹಿಂದೆಂದೂ ಇಲ್ಲದುದನ್ನು ಸೃಷ್ಟಿಸುವ ಸಂದರ್ಭದಲ್ಲೇ, ಇಂತಹ ಕ್ರಾಂತಿಕಾರೀ ಬಿಕ್ಕಟ್ಟಿನ ಸಮಯದಲ್ಲೇ ಆತಂಕಗೊಂಡು, ಅವರು ಜಾಗತಿಕ ಇತಿಹಾಸದ ಈ ಹೊಸ ದೃಶ್ಯವನ್ನು ಪ್ರಾಚೀನ–ಗೌರವದ ವೇಷ ತೊಡಿಸಿ, ಈ ಎರವಲು ತಂದ ಭಾಷೆಯಲ್ಲಿ ಅರ್ಪಿಸುವ ಸಲುವಾಗಿ ಗತಕಾಲದ ದೆವ್ವ–ಪಿಶಾಚಿಗಳನ್ನು ಬ್ರಿರ ಮಾಡಿಕೊಂಡು, ಅವುಗಳ ಆ ಹಳೆಯ ಹೆಸರುಗಳನ್ನು, ಯುದ್ಧ ಘೋಷಗಳನ್ನು ಹಾಗೂ ವೇಷಭೂಷಣಗಳನ್ನು ತಮ್ಮ ಉದ್ದೇಶ ಪೂರೈಸಲು ಎರವಲು ಪಡೆಯುತ್ತಾರೆ. ಆದ್ದರಿಂದಲೇ ಲ್ಯೂಥರ್ ಕ್ರಿಸ್ತದೂತನ ಮುಖವಾಡ ಧರಿಸಿದ...." [ಹದಿನೆಂಟನೇ ಬ್ರ್ರುಮೇರ್].

ಆದರೆ ಭಾರತದಲ್ಲಿ ಇದು ಪ್ರಸ್ತುತಕ್ಕೆ ಸ್ಫೂರ್ತಿ ತುಂಬಲು ಗತಕಾಲವನ್ನು ಉಪಯೋಗಿಸುವ ಪ್ರಶ್ನೆ ಮಾತ್ರವಾಗಿರಲಿಲ್ಲ. ಜಾತಿಯಂತಹ ಪ್ರಜಾಪ್ರಭುತ್ವ–ವಿರೋಧೀ ವ್ಯವಸ್ಥೆಯೊಂದಿಗೆ, ಮತೀಯ ಕಂದಾಚಾರದೊಡನೆ ಒಪ್ಪಂದ ಮಾಡಿಕೊಳ್ಳಲು ಅನುಕೂಲವಾಗುವಂತೆ ಪುನರುತ್ಥಾನವಾದೀ ಭಾವನೆಗಳನ್ನು ಇಲ್ಲಿ ಓಲೈಸಲಾಯಿತು. ಯಾಕೆಂದರೆ ಸ್ವಾತಂತ್ರ್ಯಾಂದೋಲನದ ಮುಂಚೂಣಿಯಲ್ಲಿ ತನ್ನನ್ನು ಇರಿಸಿಕೊಂಡ ಉದೀಯಮಾನ ಬೂರ್ಜ್ವಾ ವರ್ಗ - ಕಾರ್ಮಿಕ ವರ್ಗ ಆಗ ದುರ್ಬಲವಾಗಿತ್ತು–ಆರಂಭದಿಂದಲೇ ಕುರುಡು ಮತೀಯತೆ ಹಾಗೂ ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಿದ್ದ ಭೂಮಾಲಕರ ಹಿತಾಸಕ್ತಿಗಳು, ಅವರ ಊಳಿಗಮಾನ್ಯ ಸವಲತ್ತುಗಳು ಹಾಗೂ ಸಮಸ್ತ ಗ್ರಾಮ ವ್ಯವಸ್ಥೆಯೊಡನೆ ರಾಜಿ ಮಾಡಿಕೊಳ್ಳುವುದರಲ್ಲಿ ಆಸಕ್ತವಾಗಿತ್ತು.

ಈ ರಾಜೀ ಭಾವದಲ್ಲೇ ಮತೀಯತೆ, ಕೋಮುವಾದ ಹಾಗೂ ಜಾತೀಯತೆಯ ಮುಂದುವರಿಕೆಗೆ ಕಾರಣ ಅಡಗಿದೆ. ಸತತವಾಗಿ ನಡೆದುಬಂದ ಈ ಒಪ್ಪಂದ ಹಾಗೂ ಅದರ ಪ್ರಕಾರವೇ ಅನುಸರಿಸಿದ ಬಂಡವಾಳಶಾಹೀ ಮಾರ್ಗದ ಪ್ರತಿಫಲನ ಇದು. ಆದ್ದರಿಂದಲೇ ಒಂದಾದ ಮೇಲೊಂದರಂತೆ ಪಂಚವಾರ್ಷಿಕ ಯೋಜನೆಗಳು 'ಯಶಸ್ವಿ'ಯಾದರೂ ಭೂತಕಾಲದ ಈ ದುಸ್ವಪ್ನವನ್ನು ಇನ್ನೂ ಕಳಚಿಕೊಳ್ಳಲಾಗಿಲ್ಲ. ಅದು ದೇಶದ ಐಕ್ಯತೆಯನ್ನು ಕೊರೆಯುತ್ತಲೇ ಇದೆ.

ನಾಗರಿಕರಲ್ಲಿ ಸಮಾನತೆ ಹಾಗೂ ದೇಶಕ್ಕೆ ಮತ್ತು ರಾಷ್ಟ್ರಕ್ಕೆ ನಿಷ್ಠೆ, ಉಳಿದೆಲ್ಲಾ ನಿಷ್ಠೆಗಳು ಇದಕ್ಕೆ ಅಧೀನ ಇವನ್ನೆಲ್ಲಾ ಹೊಂದಿದ ಆಧುನಿಕ ರಾಷ್ಟ್ರವೊಂದರ ಬೆಳವಣಿಗೆಗೆ ಕೋಮುವಾದ, ಮತೀಯ ಪ್ರತ್ಯೇಕತೆ ಹಾಗೂ ಜಾತೀಯತೆ ತಡೆಯೊಡ್ಡುತ್ತವೆ. ಎಲ್ಲಾ ಬಂಡವಾಳಶಾಹೀ–ಪೂರ್ವದ ಪ್ರತ್ಯೇಕತಾವಾದಿ ತತ್ವಗಳನ್ನು ಪರಾಜಿತಗೊಳಿಸಿ, ಅವುಗಳನ್ನು ತನ್ನ ಅಗತ್ಯಗಳಿಗೊಳಪಡಿಸಿದಾಗ ಮಾತ್ರ ಏಕೈಕ ಬಂಡವಾಳಶಾಹೀ ಮಾರುಕಟ್ಟೆಯಲ್ಲಿ ಒಗ್ಗೂಡಿದ ಆಧುನಿಕ ಬೂರ್ಜ್ವಾ ರಾಷ್ಟ್ರ ಉದಯಿಸಲು ಸಾಧ್ಯ.

ಭಾರತದ ಬೂರ್ಜ್ವಾಗಳಿಗೆ ಅಗತ್ಯವಿರಲಿಲ್ಲ

ಯುರೋಪಿನಲ್ಲಿ ಉದೀಯಮಾನ ಬೂರ್ಜ್ವಾ ವರ್ಗ, ಊಳಿಗಮಾನ್ಯ ತತ್ವವಿಚಾರಗಳು, ಹಾಗೇನೇ ರೋಮನ್ ಕ್ಯಾಥೋಲಿಕ್ ವಿರುದ್ಧ ಹೋರಾಡಬೇಕಾಗಿತ್ತು. ಇಷ್ಟೇ ಅಲ್ಲ, ಅವುಗಳ ಆಧಿಪತ್ಯವನ್ನು ಮುರಿಯಲು ಊಳಿಗಮಾನ್ಯ ಪ್ರಭುಗಳ ರಾಜಕೀಯ ಹಾಗೂ ಆರ್ಥಿಕ ಶಕ್ತಿಗಳನ್ನು ನಿರ್ನಾಮಗೊಳಿಸಬೇಕಾಯಿತು. –ಅರಸೊತ್ತಿಗೆಯನ್ನು ರದ್ದುಗೊಳಿಸಬೇಕಾಯಿತು. ಅಥವಾ ಇಂಗ್ಲೆಂಡಿನಲ್ಲಿ ಮಾಡಿದಂತೆ ಅದನ್ನು ನಿರುಪದ್ರವಿಯನ್ನಾಗಿ ಮಾಡಲಾಯಿತು. ಆದರೂ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿ ಧರ್ಮದ ಪ್ರಭಾವ ಸಂಪೂರ್ಣವಾಗಿ ಮಾಯವಾಗಲಿಲ್ಲ ಎಂಬುದೇನೋ ನಿಜ. ವಾಸ್ತವವಾಗಿ ಸರಕು ಉತ್ಪಾದಕರ ಹೊಸ ಸಮಾಜಕ್ಕೆ ಅನುಗುಣವಾದ ಹೊಸ ಧರ್ಮ ಕಾಣಿಸಿಕೊಂಡಿತು. ಅದೇ ಅಮೂರ್ತ ಮಾನವನ ಬಗ್ಗೆ ಕ್ರಿಶ್ಚಿಯನ್ ಕಲ್ಪನೆಯನ್ನು, ವಿಶೇಷವಾಗಿ ಅದರ ಬೂರ್ಜ್ವಾ ಬೆಳವಣಿಗೆಯನ್ನು ಆಧರಿಸಿದ ಪ್ರಾಟೆಸ್ಟೆಂಟ್ ಪಂಥ. ಆದರೆ ಹೊಸ ಸಮಾಜದಲ್ಲಿ ಧರ್ಮ ಸಮಾಜದ ಅವಶ್ಯಕತೆಗಳಿಗೆ ಅಧೀನವಾಗಿತ್ತು. ಅದರಿಂದ ಹೊಸ ಸಮಾಜದ ಉದ್ದೇಶ ಸಾಧನೆಯಾಗಬೇಕಿತ್ತು. ಕೆಲವೊಂದು ಸಂದರ್ಭಗಳಲ್ಲಿ, ಬೂರ್ಜ್ವಾ ಸಮಾಜಕ್ಕಾಗಿ ನಡೆದ ಹೋರಾಟದಲ್ಲಿ ಭೌತವಾದೀ ತತ್ವಶಾಸ್ತ್ರ ನೇರವಾಗಿ ಧರ್ಮದ ಆಧಾರ ಭೂತ ಕಲ್ಪನೆಗಳಿಗೇ ಸವಾಲೊಡ್ಡಿತು.

ಇದ್ದುದು ಏನಾಯಿತೆಂದರೆ ಉದೀಯಮಾನ ಬೂರ್ಜ್ವಾ ವರ್ಗ ರಾಜಕೀಯ ಶಕ್ತಿ ಪಡೆಯಲು, ಊಳಿಗಮಾನ್ಯ ಪ್ರಭುಗಳನ್ನು ಪದಚ್ಯುತಗೊಳಿಸಲು, ಅವರ ಆರ್ಥಿಕ ತಳಹದಿಯನ್ನು ಹಾಗೂ ಅದನ್ನು ಪೋಷಿಸುತ್ತಿದ್ದ ತಾತ್ವಿಕ ಮೇಲ್ ರಚನೆಯನ್ನು (idealogical superstructure) ನಾಶ ಮಾಡಲು ಜೀವನ್ಮರಣ ಹೋರಾಟ ನಡೆಸಬೇಕಿತ್ತು. ಈ ತಾತ್ವಿಕ ಮೇಲ್ ರಚನೆಯಲ್ಲಿ ರೋಮನ್ ಕ್ಯಾಥೊಲಿಕ್ ಚರ್ಚ್‌ನ ತತ್ವ ವಿಚಾರವೂ ಸೇರಿತ್ತು.

ಆದರೆ ಭಾರತ ಹಾಗೂ ಹೊಸದಾಗಿ ವಿಮೋಚನೆಗೊಂಡ ದೇಶಗಳಲ್ಲಿ ಹೀಗಾಗಲಿಲ್ಲ. ಮತೀಯತೆ, ಕೋಮುವಾದ ಹರಡಿದ ಪ್ರತ್ಯೇಕತಾ ಭಾವನೆ ರಾಷ್ಟ್ರೀಯ ಹೋರಾಟದುದ್ದಕ್ಕೂ ಇದ್ದು, ದೇಶದ ವಿಭಜನೆಗೆ ಕಾರಣವಾದುದನ್ನು ನಾವು ಕಂಡಿದ್ದೇವೆ. ಈಗ ಮತ್ತೆ ಭುಗಿಲೆದ್ದು ಅವು ದೇಶದ ಐಕ್ಯತೆಗೆ ಸವಾಲಾಗುತ್ತಿವೆ. ಇದಕ್ಕೆ ಇಲ್ಲಿ ವಿಮೋಚನಾ ಹೋರಾಟಕ್ಕೆ ಬೂರ್ಜ್ವಾವರ್ಗ ಮುಂದಾಳುತ್ವ ನೀಡಿದ ವಿಲಕ್ಷಣ ಪರಿಸ್ಥಿತಿಯೇ ಕಾರಣ. ಭಾರತದ ಬೂರ್ಜ್ವಾವರ್ಗ ತನ್ನದೇ ಆದ ಆಕಾಂಕ್ಷೆಗಳನ್ನು ಹೊತ್ತ ವರ್ಗವಾಗಿ ರೂಪಗೊಳ್ಳುವ ಸಮಯಕ್ಕಾಗಲೇ ಬ್ರಿಟಿಶರು ಭಾರತದಲ್ಲಿ ಊಳಿಗಮಾನ್ಯ ಪ್ರಭುತ್ವವನ್ನು ಮುರಿದುಬಿಟ್ಟಿದ್ದರು. ಬೂರ್ಜ್ವಾ ವರ್ಗ ಇಲ್ಲಿ ಪ್ರಭುತ್ವಕ್ಕಾಗಿ ಸಾಮ್ರಾಜ್ಯಶಾಹಿಗಳೊಡನೆ ಹೋರಾಡಬೇಕಿತ್ತೇ ಹೊರತು, ತನ್ನ ಅಸ್ತಿತ್ವಕ್ಕಾಗಿ ಊಳಿಗಮಾನ್ಯ ಪ್ರಭುತ್ವದೊಂದಿಗಾಗಲಿ, ಅದರ ತತ್ವ ವಿಚಾರಗಳೊಂದಿಗಾಗಲಿ ಹೋರಾಡಬೇಕಾಗಿರಲಿಲ್ಲ.

(ಮುಂದುವರಿಯುವುದು)

ಮಂಗಳೂರಿನಲ್ಲಿ

ಕಾರ್ಲ್‌ಮಾರ್ಕ್ಸ್ ಮರಣಶತಾಬ್ಧಿ ಆಚರಣೆ

"ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗೊಳಿಸಲು ಕಾರ್ಲ್‌ಮಾರ್ಕ್ಸ್‌ರ ವೈಜ್ಞಾನಿಕ ಸಮಾಜವಾದಿ ತತ್ವದ ಆಧಾರದಲ್ಲಿ ಹೊಸ ಸಮಾಜವನ್ನು ಕಟ್ಟಿ ಹೋರಾಡುತ್ತಿರುವವರು ಒಂದು ಕಡೆಗೆ ಇದ್ದರೆ, ಶೋಷಣೆಯ ಪದ್ಧತಿಯನ್ನೇ ಬೆಳೆಸಿಕೊಂಡು ಹೋಗುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಶಾಶ್ವತವಾಗಿ ಉಳಿಸಬೇಕೆಂದು ಪ್ರಯತ್ನಿಸುವವರು ಇನ್ನೊಂದು ಕಡೆಗೆ ಇದ್ದಾರೆ. ಈ ದೇಶದ ಕಾರ್ಮಿಕರು, ರೈತರು, ಮಧ್ಯಮ ವರ್ಗ ಬುದ್ಧಿಜೀವಿಗಳು ಮತ್ತು ಇತರ ಜನಸಾಮಾನ್ಯರು ಈ ಎರಡು ಬಣಗಳ ಪೈಕಿ ತಾವು ಯಾವ ಕಡೆಯಲ್ಲಿ ಇರಬೇಕೆಂಬುದನ್ನು ತೀರ್ಮಾನಿಸಬೇಕು. ಬಂಡವಾಳಶಾಹಿ ವ್ಯವಸ್ಥೆಯು ತನ್ನ ಮರಣಶಯ್ಯೆಯಲ್ಲಿದೆ. ಅದರ ಅವಸಾನ ಖಂಡಿತ. ಆದರೂ ಮರಣೋನ್ಮುಖವಾಗಿರುವ ಆ ನೀಚ ವ್ಯವಸ್ಥೆಯನ್ನು ಹೇಗಾದರೂ ಉಳಿಸಿಕೊಂಡು ಮುಂದುವರಿಸಬೇಕೆಂಬ ಹತಾಶ ಪ್ರಯತ್ನಗಳನ್ನು ಬಂಡವಾಳಶಾಹಿ ವರ್ಗವು ಮಾಡುತ್ತಿದೆ. ಶೋಷಿತ ಜನರು ತಮ್ಮ ಚಾರಿತ್ರಿಕ ಕರ್ತವ್ಯವನ್ನು ತಿಳಿದುಕೊಂಡು, ಸಂಘಟಿತರಾಗಿ ಮಾರ್ಕ್ಸ್ ಎಂಗೆಲ್ಸ್ ಮತ್ತು ಲೆನಿನ್ ತೋರಿಸಿಕೊಟ್ಟ ದಾರಿಯಲ್ಲಿ ಮುನ್ನಡೆದರೆ ಮಾತ್ರ ಶೋಷಣಾರಹಿತವಾದ ಹೊಸ ಸಮಾಜವನ್ನು ಕಟ್ಟಲು ಸಾಧ್ಯ ಎಂದು ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರೂ ಸರ್ಜರಿ ವಿಭಾಗದ ಮುಖ್ಯಸ್ಥರೂ ಆದ ಡಾ| ಪಿ. ಕೆ. ಆರ್. ವಾರಿಯರ್ ಹೇಳಿದರು. ಕಾರ್ಲ್ ಮಾರ್ಕ್ಸ್ ಮರಣ ಶತಾಬ್ದಿ ಆಚರಣೆಯ ಅಂಗವಾಗಿ ಮಾರ್ಚ್ 28 ರಂದು ಮಂಗಳೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡುತ್ತಿದ್ದರು,

ಕ್ರಾಂತಿಪೂರ್ವದ ಚೀನಾದ ಜನರಿಗೆ ಅಗಾಧ ಪ್ರಮಾಣದ ಅಫೀಮನ್ನು ಮಾರಾಟ ಮಾಡುತ್ತಿದ್ದ ಬ್ರಿಟಿಷರ ನೀತಿಯನ್ನು ಹೆದ್ದಾರಿ ದರೋಡೆ ಎಂದು ವರ್ಣಿಸಲಾಗುತ್ತಿತ್ತು. ಅಫೀಮಿನ ಅಮಲಿನಲ್ಲಿ ಚೀನಿ ಜನತೆ ಶೋಷಣೆ ಮತ್ತು ದಾರಿದ್ರ್ಯದ ನರಳಾಟವನ್ನು ಮರೆಯುವಂತೆ ಮಾಡುವ

(6ನೇ ಪುಟ ನೋಡಿ)

ಅಂತರರಾಷ್ಟ್ರೀಯ:

ಬಾಂಗ್ಲಾದೇಶ - ಮಿಲಿಟರಿ ಸರ್ವಾಧಿಕಾರದ ವಿರುದ್ಧ ವಿದ್ಯಾರ್ಥಿ ಚಳವಳಿ

ಫೆಬ್ರುವರಿ ತಿಂಗಳ ಮೊದಲ ವಾರದಲ್ಲಿ ಢಾಕಾ ವಿಶ್ವವಿದ್ಯಾಲಯದಲ್ಲಿ ನಡೆದ ಗಲಭೆ, ರಾಜಕೀಯ ಮುಖಂಡರುಗಳ ಬಂಧನ, ಇವುಗಳೆಲ್ಲ ಬಾಂಗ್ಲಾ ದೇಶದಲ್ಲಿ ಇರ್‌ಶಾದ್ ನೇತೃತ್ವದ ಮಿಲಿಟರಿ ಸರ್ವಾಧಿಕಾರದ ವಿರುದ್ಧ ಜನತೆಯಲ್ಲಿ ಮೂಡಿರುವ ಅತೃಪ್ತಿ ಮತ್ತು ಜನತಾ ಹೋರಾಟವನ್ನು ಸರ್ವಾಧಿಕಾರಿ ಸೈನ್ಯಶಕ್ತಿ ಬಗ್ಗುಬಡಿಯುವ ರೀತಿಯ ಪ್ರತೀಕವಾಗಿದೆ. ರಾಷ್ಟ್ರೀಯ ವಿಮೋಚನೆಯ ನಂತರ ನಡೆದ ನಿರಂತರ ಸೈನ್ಯ ದಂಗೆಗಳು ಜನರ ಆಶಯವನ್ನು ಭಗ್ನಗೊಳಿಸಿದೆ. ಬೆಳೆಯುತ್ತಿರುವ ಆರ್ಥಿಕ ಮುಗ್ಗಟ್ಟು, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮಿಲಿಟರಿ ಸರ್ವಾಧಿಕಾರಿಗಳಿಂದ ನಡೆದ ದಾಳಿ ಹಾಗೂ ಇತ್ತೀಚೆಗೆ ಸಂವಿಧಾನವನ್ನು ಇಸ್ಲಾಮೀಕರಣಗೊಳಿಸುವ ಹೆಸರಿನಲ್ಲಿ ಮರ್ಧನವನ್ನು ಮುಂದುವರಿಸುವ ತಂತ್ರಗಾರಿಕೆ ನಡೆಯುತ್ತಿರುವುದು—ಇದೆಲ್ಲವೂ ರಾಷ್ಟ್ರ ವಿಮೋಚನಾ ಹೋರಾಟ ನಡೆದ ಸಂದರ್ಭದಲ್ಲಿ ಇರಿಸಲಾಗಿದ್ದ ಕನಸುಗಳನ್ನು ನುಚ್ಚುನೂರುಗೊಳಿಸಿವೆ.

ವಿದೇಶಿ ಪ್ರವಾಸಕ್ಕೆ ಹೊರಡುವ ಮೊದಲು ಕೆಲವಾರು ನಿಯಮಾವಳಿ ಕ್ರಮಗಳ ಬಗ್ಗೆ ಇರ್‌ಶಾದ್ ನೀಡಿದ ಹೇಳಿಕೆಗಳು ಢಾಕಾ ವಿಶ್ವವಿದ್ಯಾಲಯದಲ್ಲಿ ಹೋರಾಟದ ಕಿಡಿ ಹತ್ತಲು ಕಾರಣವಾಯಿತು.

ಭಾಷಾ ಚಳುವಳಿ ದಿನ : "....ರಾಷ್ಟ್ರದ ಮುಂದಿನ ಸಂವಿಧಾನದಲ್ಲಿ ಇಸ್ಲಾಂ ಪ್ರಮುಖ ಸ್ಥಾನವನ್ನು ಪಡೆದಿರುತ್ತದೆ..." ಎಂದು ಜನವರಿ 14ರಂದು ಇರ್‌ಶಾದ್ ಘೋಷಿಸಿದ. ಹಾಗೂ ಫೆಬ್ರುವರಿ 21ರ ಹುತಾತ್ಮರ ದಿನವನ್ನು ಸಾಂಪ್ರದಾಯಿಕ ಬೆಂಗಾಲಿ ಮಾದರಿಯಲ್ಲಿ ಆಚರಿಸುವ ಬದಲು ಆ ದಿನದಂದು ಶಾಹಿದ್ ಮಿನಾರ್‌ನಲ್ಲಿ ಭಾಷಾ ಚಳುವಳಿಯಲ್ಲಿ ಹುತಾತ್ಮರಾದವರ ನೆನಪಿಗಾಗಿ ಖುರಾನ್ ಗ್ರಂಥವನ್ನು ಪಠಿಸಲಾಗುವುದು ಎಂದು ಹೇಳಿಕೆ ನೀಡಲಾಯಿತು. ಮಿನಾರ್‌ನಲ್ಲಿ ರಂಗೋಲೆ ಬರೆಯೋದನ್ನು ಟೀಕಿಸಿದ ಇರ್‌ಶಾದ್, "....ಇದು ಇಸ್ಲಾಂ ಸಂಸ್ಕೃತಿಯೆ? ಬಾರ್‌ಕತ್ (ಹುತಾತ್ಮರಲ್ಲಿ ಒಬ್ಬ) ಮುಸ್ಲಿಂ ಆಗಿದ್ದ. ಆದ್ದರಿಂದ ಆತನ ಸಾವಿನ ದಿನಾಚರಣೆಯ ದಿನ ಖುರಾನ್ ಪಠಣ ಮಾಡುವುದು ಸಹಜವಾಗಿದೆ..." ಎಂದು ಹೇಳಲಾರಂಭಿಸಿದ.

ಫೆಬ್ರುವರಿ 21 ಬಾಂಗ್ಲಾ ದೇಶದ ಚರಿತ್ರೆಯಲ್ಲಿ ಕೆಂಪು ಅಕ್ಷರದಲ್ಲಿ ಬರೆದಿಡಬೇಕಾದ ದಿನವಾಗಿದ್ದು ಈ ದಿನವು ಪ್ರಜಾಪ್ರಭುತ್ವ, ಸಂಸ್ಕೃತಿ, ಮೂಲಭೂತ ಹಕ್ಕುಗಳು ಮತ್ತು ಜಾತ್ಯಾತೀತತೆಯ ಪ್ರತಿರೂಪವಾಗಿ ಮೂಡಿಬಂತು. 1952ರಲ್ಲಿ ಇದೇ ದಿನದಂದು ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಉರ್ದುವನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ಸರ್ಕಾರದ ಕ್ರಮವನ್ನು ಖಂಡಿಸಿ ಬೀದಿಗಿಳಿದು ಪ್ರತಿಭಟಿಸಿ ಪ್ರಾಣಾರ್ಪಣೆ ಮಾಡಿದ್ದರು. ಬಹು ಸಂಖ್ಯೆಯ ಜನ ಮಾತನಾಡುವ ಬಂಗಾಳಿ ಭಾಷೆಯು ತಮ್ಮ ಭಾಷೆಯಾಗಬೇಕೆಂದು ಆಗಿನ ವಿದ್ಯಾರ್ಥಿ ಚಳುವಳಿ ಬಯಸಿತ್ತು. ಫೆಬ್ರುವರಿ 21ರಂದು ವ್ಯಕ್ತವಾದ ಭಾಷಾ ರಾಷ್ಟ್ರೀಯವಾದವು ಮುಂದೆ ಯಶಸ್ವಿ ರಾಷ್ಟ್ರ ವಿಮೋಚನಾ ಚಳುವಳಿಗೆ ಕಾರಣವಾಯಿತು. ಇರ್‌ಶಾದ್ ತನ್ನ ಹೇಳಿಕೆಗಳಿಂದ ಬಾಂಗ್ಲಾದೇಶ ಸ್ಥಾಪನೆಯಾದಾಗಿದ್ದ ಉದ್ದೇಶಕ್ಕೆ ಅಪಮಾನ ಮಾಡಿದ.

ಕೆಟ್ಟ ಶಿಕ್ಷಣ ನೀತಿ : ಇಸ್ಲಾಂನ್ನು ಬಾಂಗ್ಲಾ ದೇಶದ ರಾಷ್ಟ್ರೀಯ ಧರ್ಮವನ್ನಾಗಿ ಮಾಡುವುದರ ಅಂಗವಾಗಿ ಇರ್‌ಶಾದ್ ತಂದ ಇನ್ನೊಂದು ಕೆಟ್ಟ ಕ್ರಮವೆಂದರೆ, ಅರೇಬಿಕ್ ಭಾಷೆಯನ್ನು ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಕಡ್ಡಾಯಗೊಳಿಸಿರುವುದು. ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವತ್ತ ಅಥವಾ ಅವಿದ್ಯಾವಂತಿಕೆಯನ್ನು ತೊಡೆದು ಹಾಕುವತ್ತ ತನ್ನ ಪ್ರಯತ್ನವನ್ನು ನಿರ್ದೇಶಿಸುವ ಬದಲು, ಪಾಶ್ಚಿಮಾತ್ಯದ ಎಣ್ಣೆ ದುಡ್ಡಿನ ಬಕಾಸುರರ ಸಂಧಾರಣಾವಾದದಂತೆ ಕಾರ್ಯಬಾರ ನಡೆಸಿ ಹಳೇ ಪದ್ಧತಿಗಳನ್ನು ಅನುಷ್ಠಾನಕ್ಕೆ ತರುವತ್ತ ಮಿಲಿಟರಿ ಸರ್ವಾಧಿಕಾರಿ ಗಮನಹರಿಸಿದ.

ಕುವೈತ್, ಮೊರೆಕ್ಕೊ, ಫ್ರಾನ್ಸ್ ಮೊದಲಾದ ರಾಷ್ಟ್ರಗಳಿಗೆ 8 ದಿನಗಳ ಕಾಲ ಪ್ರವಾಸ ಮಾಡಿದ ಇರ್‌ಶಾದ್ ದೇಶದ ತೀವ್ರ ಆರ್ಥಿಕ ಅಧಃಪತನದಿಂದ ಕಾಪಾಡಲು ವಿದೇಶಿ ಹಣದ ನೆರವನ್ನು ಬೇಡಿರುತ್ತಾನೆ ಮತ್ತು ದೇಶದೊಳಗೆ ಲಭ್ಯವಿರುವ ಕಡಿಮೆ ಬೆಲೆಯ ಶ್ರಮಶಕ್ತಿಯನ್ನು ವಿದೇಶಿ ಬಂಡವಾಳಗಾರರಿಗೆ ಒತ್ತೆ ಇಡುವ ಭರವಸೆಯನ್ನು ಕೊಟ್ಟಿರುತ್ತಾನೆ.

ಸಂಘಟಿತ ವಿರೋಧಿ ಶಕ್ತಿ : ಫೆಬ್ರುವರಿ 1ರಂದು ಬಾಂಗ್ಲಾ ದೇಶದ 15 ಪ್ರಮುಖ ರಾಜಕೀಯ ಪಕ್ಷಗಳು ಮಿಲಿಟರಿ ಆಡಳಿತವನ್ನು ಕೊನೆಗೊಳಿಸಲು ಮತ್ತು ಜನರ ಮೂಲಭೂತ ಹಕ್ಕುಗಳನ್ನು ಪುನರ್‌ಸ್ಥಾಪಿಸಲು ಮತ್ತು ರಾಜಕೀಯ ಚಟುವಟಿಕೆಗಳನ್ನು ಆರಂಭಿಸಲು ಒತ್ತಾಯ ಮಾಡಿದವು. ಜಂಟಿ ಕೇಳಿಕೆಯಲ್ಲಿ ಅವರು 1972ರ ಸಂವಿಧಾನವನ್ನು ಮರು ಸ್ಥಾಪಿಸಲು ಮತ್ತು ನ್ಯಾಯಸಮ್ಮತವಾದ ಮತ್ತು ನಿಷ್ಪಕ್ಷಪಾತವಾದ ಚುನಾವಣೆ ನಡೆಸಲು ಕೇಳಿಕೊಂಡರು. ಫೆಬ್ರುವರಿ 21ರ ಭಾಷಾ ಚಳುವಳಿ ದಿನವನ್ನು ಸಂಘಟಿತರಾಗಿ ಆಚರಿಸಲು ಮತ್ತು ಪ್ರತಿಗಾಮಿ ಶಕ್ತಿಗಳು ಈ ದಿನದ ಮಹತ್ವವನ್ನು ಕಡೆಗಣಿಸಲು ಮಾಡುವ ಪ್ರಯತ್ನವನ್ನು ಸೋಲಿಸಲು ಹೇಳಿಕೆಯು ಜನತೆಗೆ ಕರೆ ನೀಡಿದೆ. ಜಾತ್ಯಾತೀತತೆ, ರಾಜ್ಯ, ಭಾಷೆ ಮತ್ತು ಶಿಕ್ಷಣದ ಮೂಲಭೂತ ನಿಯಮಗಳನ್ನು ಸಂವಿಧಾನ ಮತ್ತು ಜನರ ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ವಿವಾದವನ್ನು ಸರ್ವಾಧಿಕಾರಿ ಸರ್ಕಾರ ಎಬ್ಬಿಸುತ್ತಿದೆ ಎಂದು ಅವರು ಆಪಾದಿಸಿದ್ದಾರೆ.

ಬಾಂಗ್ಲಾ ದೇಶದ ಕಮ್ಯೂನಿಸ್ಟ್ ಪಕ್ಷವೂ ಸೇರಿದಂತೆ ಅವಾಮಿ ಲೀಗ್ ಮೊದಲಾದ ಪಕ್ಷಗಳು ಹೇಳಿಕೆಗೆ ಸಹಿ ಮಾಡಿವೆ.

ವಿದ್ಯಾರ್ಥಿಗಳ ಕರೆ : ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕೇಂದ್ರಿಯ ಕಾರ್ಯಕಾರಿ ಸಮಿತಿಯು ಜನತೆ ಮತ್ತು ವಿದ್ಯಾರ್ಥಿಗಳಿಗೆ ಫೆಬ್ರವರಿ 21ನ್ನು ಶಿಕ್ಷಣ ಮತ್ತು ಪ್ರಜಾಪ್ರಭುತ್ವಕ್ಕಾಗಿ ನಡೆಯುವ ಹೋರಾಟದ ದಿನವನ್ನಾಗಿ ಆಚರಿಸಲು ಕರೆ ನೀಡಿತು. ಫೆಬ್ರುವರಿ 14ರಂದು ರಾಷ್ಟ್ರದಾದ್ಯಂತ ಮುಷ್ಕರ ನಡೆಸಲು ಕರೆ ನೀಡಲಾಗಿತ್ತು.

ಇದಕ್ಕೆ ಪ್ರತಿಯಾಗಿ ಮಿಲಿಟರಿ ಸರ್ವಾಧಿಕಾರಿ ಆಡಳಿತೆಯು ಮುಸ್ಲಿಂ ಮತಾಂಧತೆಯನ್ನು ಬೆಂಬಲಿಸುವ ಇಸ್ಲಾಮಿಕ್ ಛಾತ ಶಿಬಿರ್ ಸಂಘಟನೆಯು ಢಾಕ ವಿಶ್ವವಿದ್ಯಾಲಯದ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿಗಳೊಂದಿಗೆ ತಿಕ್ಕಾಟ ನಡೆಸುವಂತೆ ಸಂಚು ನಡೆಸಿತು. ಫೆಬ್ರುವರಿ 6ರಂದು ನಡೆದ ದೊಂಬಿಯಲ್ಲಿ 300 ವಿದ್ಯಾರ್ಥಿಗಳು ಗಾಯಗೊಂಡರು. "ಭಾಷಾ ಚಳುವಳಿಯ ದಿನ"ದ ಆಚರಣೆಯು ಸಾಮೂಹಿಕ ಚಳುವಳಿಯಾಗಿ ಬೆಳೆಯುವ ಸೂಚನೆ ಕಂಡು ಬಂದಾಗ ಮಿಲಿಟರಿ ಆಡಳಿತವು ಭಾಷಾ ಚಳುವಳಿಯ ದಿನದ ಬೇಡಿಕೆಯನ್ನೂ ಅಂಗೀಕರಿಸಿತು. ಆದರೆ ಅದೇ ವೇಳೆಗೆ ಮಿಲಿಟರಿ ಕಾನೂನನ್ನು ತೀವ್ರಗೊಳಿಸಲಾಗುವುದೆಂದೂ ಇರ್‌ಶಾದ್ ಘೋಷಿಸಿದ. ಈಗಿನ ಆಡಳಿತದ ವಿರುದ್ಧದ ಯಾವ ಚಟುವಟಿಕೆಗಳನ್ನೂ ಸಹಿಸಲಾಗುವುದಿಲ್ಲವೆಂದು ಹೇಳಿದ. ಸರ್ಕಾರವನ್ನು ಬಹಿರಂಗವಾಗಿ ಟೀಕಿಸುವ ರಾಜಕೀಯ ಪಕ್ಷಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಸಿದ!

ಪ್ರಜಾಪ್ರಭುತ್ವವಾದಿ ಮನೋಭಾವದ ಜನತೆ ಇರ್‌ಶಾದ್‌ನ ಇಂತಹ ಹೇಳಿಕೆಗಳಿಂದ ಯಾವ ರೀತಿಯೂ ಅಧೈರ್ಯಗೊಂಡಿಲ್ಲ. ಅಂತೆಯೇ ಮಿಲಿಟರಿ ಸರ್ವಾಧಿಕಾರದ ವಿರುದ್ಧ ಚಳುವಳಿ ಬೆಳೆಯುತ್ತಲೇ ಇದೆ. ಫೆಬ್ರವರಿ 14 ಮತ್ತು 15ರಂದು ದೇಶದ ಪ್ರಮುಖ 4 ನಗರಗಳಲ್ಲಿ ಪೋಲೀಸರು ಮತ್ತು ಮಿಲಿಟರಿಯೊಂದಿಗೆ ಜನತೆ ನಡೆಸಿದ ಘರ್ಷಣೆಯಲ್ಲಿ 100ಕ್ಕೂ ಮಿಕ್ಕ ಜನ ಗಾಯಗೊಂಡರು. 5 ಜನ ಸತ್ತಿರುವುದಾಗಿ ವರದಿಯಾಗಿದೆ. 1400 ಜನ ಬಂಧಿತರಾಗಿದ್ದಾರೆ.

ಮಿಲಿಟರಿ ಸರ್ವಾಧಿಕಾರದ ವಿರುದ್ಧ ಬೆಳೆಯುತ್ತಿರುವ ಪ್ರಜಾಪ್ರಭುತ್ವವಾದಿ ಹೋರಾಟವನ್ನು ಬಗ್ಗುಬಡಿಯುವ ಮೊದಲನೆಯ ಕ್ರಮವಾಗಿ ಇರ್‌ಶಾದ್ ರಾಜಕೀಯ ಪಕ್ಷಗಳ ಮುಖಂಡರುಗಳ ಸಾಮೂಹಿಕ ಬಂಧನ ಮಾಡಿಸಿರುತ್ತಾನೆ. ದಿನೇ ದಿನೇ ಬೆಳೆಯುತ್ತಿರುವ ಚಳುವಳಿ ಮಿಲಿಟರಿ ಆಡಳಿತೆಯ ಭದ್ರತೆಗೆ ಅಪಾಯವನ್ನೊಡ್ಡುತ್ತಿರುವುದರಿಂದ ಬೆದರಿದ ಇರ್‌ಶಾದ್ ರಾಷ್ಟ್ರದ ಮುಂದಿನ ದಿನಗಳ ಬಗ್ಗೆ ಯೋಚಿಸಲು ಮಿಲಿಟರಿ ಅಧಿಕಾರಿಗಳ ಮತ್ತು ರಾಜಕೀಯ ಪಕ್ಷಗಳ ನಡುವೆ ಮಾತುಕತೆ ನಡೆಸಲು ಮುಂದಾಗಿದ್ದಾನೆ.

(ಪಿ. ಡಿ. ಕೃಪೆ)

—**ಕುಮಾರ್ ಕುಂದಾಪುರ**

ಪೋಲಿಟ್‌ಬ್ಯೂರೊ ಖಂಡನೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೋಲಿಟ್ ಬ್ಯೂರೊ ಹೇಳಿಕೆಯೊಂದನ್ನು ನೀಡಿ ಬಾಂಗ್ಲಾ ದೇಶದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಾಮೂಹಿಕ ಬಂಧನವನ್ನು ತೀವ್ರವಾಗಿ ಖಂಡಿಸಿದೆ. ಬಾಂಗ್ಲಾ ದೇಶದಲ್ಲಿ ಇಸ್ಲಾಮಿಕ್ ವ್ಯವಸ್ಥೆ ಸ್ಥಾಪನೆ ಮಾಡುವ ಹೆಸರಿನಲ್ಲಿ ಇರ್‌ಶಾದ್, ಪಾಕಿಸ್ತಾನದ ತನ್ನ ಸಹಚರನಂತೆ, ಮಿಲಿಟರಿ ಸರ್ವಾಧಿಕಾರವನ್ನು ಬೆಳಸಿ ಜನತೆಯ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ಧಮನಿಸುತ್ತಿವೆ ಎಂದು ಹೇಳಿರುವ ಪೋಲಿಟ್ ಬ್ಯೂರೊ, ಹೋರಾಟ ನಡೆಸುತ್ತಿರುವ ಬಾಂಗ್ಲಾ ದೇಶದ ಜನತೆಗೆ ಬೆಂಬಲ ವ್ಯಕ್ತಪಡಿಸಿದೆ ಮತ್ತು ಬಂಧಿತ ರಾಜಕೀಯ ಮುಖಂಡರನ್ನು ಬಿಡುಗಡೆಗೊಳಿಸಲು ಮತ್ತು ವಿದ್ಯಾರ್ಥಿಗಳ ಮೇಲಿನ ದಾಳಿಯನ್ನು ನಿಲ್ಲಿಸಲು ಒತ್ತಾಯಿಸಿದೆ.

ಕಾರ್ಲ್‌ಮಾರ್ಕ್ಸ್ ಮರಣಶತಾಬ್ಧಿ ಆಚರಣೆ

(5ನೇ ಪುಟದಿಂದ)

ಕೆಲಸವನ್ನು ಬ್ರಿಟಿಷರು ಅಫೀಮು ವ್ಯಾಪಾರದ ಮೂಲಕ ಮಾಡುತ್ತಿದ್ದರು ಶೋಷಣೆ ಮತ್ತು ದಾರಿದ್ರ್ಯದ ವಿರುದ್ಧ ಹೋರಾಟ ನಡೆಸಿ, ಶೋಷಣೆಗೆ ಮೂಲವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯುವ ಚಾರಿತ್ರಿಕ ಕೆಲಸಕ್ಕಾಗಿ ಜನತೆ ಸಂಘಟಿತವಾಗುವುದನ್ನು ತಪ್ಪಿಸಲು ಅವರು ತಮ್ಮ ನೋವು ಮತ್ತು ನರಳಾಟವನ್ನು ಮರೆಯುವಂತೆ ಮಾಡುವ ಅಫೀಮಿನ ಕೆಲಸವನ್ನು ಧರ್ಮವು ಮಾಡುತ್ತಿದೆ. ಆದುದರಿಂದಲೇ 'ಧರ್ಮವು ಜನತೆಯ ಅಫೀಮು' ಎಂದು ಮಾರ್ಕ್ಸ್ ಹೇಳಿದ್ದರೂ ದಾರಿದ್ರ್ಯದಿಂದ ತತ್ತರಿಸುತ್ತಿರುವ ಜನತೆಯ ನೋವುನರಳಾಟಗಳನ್ನು ಧರ್ಮವೆಂಬ ಅಫೀಮಿನ ಮೂಲಕ ಹತೋಟಿಯಲ್ಲಿಟ್ಟು, ಶೋಷಣೆಯ ವಿರುದ್ಧವಾಗಿ ನಡೆಸುವ ಅವರ ಹೋರಾಟದ ದಾರಿ ತಪ್ಪಿಸುತ್ತಿರುವ ಬಂಡವಾಳಶಾಹಿಗಳ ಕೃತ್ಯವು ಹೆದ್ದಾರಿ ದರೋಡೆಗಿಂತಲೂ ಕೀಳುಮಟ್ಟದ್ದು ಎಂದು ಡಾ। ವಾರಿಯಾರ್ ಹೇಳಿದರು.

ಬಂಡವಾಳಶಾಹಿ ಸಮಾಜದಲ್ಲಿ ಮಾನವನ ಶ್ರಮ ಶಕ್ತಿಯೂ ಒಳಗೊಂಡಂತೆ ಪ್ರತಿಯೊಂದು ವಸ್ತುವಿನ ಬೆಲೆ ನಿಗದಿ ಮಾಡುವವರು ಕೇವಲ ಬೆರಳೆಣಿಕೆಯಷ್ಟಿರುವ ಆಳುವ ವರ್ಗದ ಜನರು ಈ ಜನರು ರೂಪಿಸಿದ ನಿಯಮವೇ "ನಾಡಿನ ನಿಯಮ" ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಲು ಈ ನಿಯಮವು ಅನುಕೂಲ ಮಾಡಿಕೊಡುತ್ತದೆ. ಕೆಲವೇ ಮಂದಿಯ ಒಡೆತನದಲ್ಲಿರುವ ಖಾಸಗಿ ಆಸ್ತಿಯು ಬಹುಸಂಖ್ಯಾತ ಜನರನ್ನು ಶೋಷಣೆ ಮಾಡುವ ಸಾಧನವಾಗಿ ಉಪಯೋಗಿಸಲ್ಪಡಲು ಈ ನಿಯಮವು ಅನುವು ಮಾಡಿ ಕೊಡುತ್ತದೆ. ಬೆರಳೆಣಿಕೆಯಷ್ಟು ಶ್ರೀಮಂತ ವ್ಯಕ್ತಿಗಳ ಸರ್ವಾಧಿಕಾರಿ ವ್ಯವಸ್ಥೆಯ ಬಂಡವಾಳಶಾಹಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಿತ್ತೆಸೆದು ವೈಜ್ಞಾನಿಕ ಸಮಾಜವಾದದ ಆಧಾರದಲ್ಲಿ ದುಡಿಯುವ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಿದಾಗ ಮಾತ್ರವೇ ಜನತೆಗೆ ನಿಜವಾದ ಪ್ರಜಾಪ್ರಭುತ್ವ ದೊರಕಲು ಸಾಧ್ಯವಾದೀತೆಂದು ಅವರು ಒತ್ತಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾ. ಪಿ. ರಾಮಚಂದ್ರರಾಯರು ಮಾತನಾಡುತ್ತಾ ಮಾರ್ಕ್ಸ್‌ವಾದದ ಆಧಾರದಲ್ಲಿ ಜಗತ್ತಿನ ಮೂರನೇ ಒಂದರಷ್ಟು ಭಾಗದ ಜನತೆ ಇಂದು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಿ ಅಲ್ಲಿ ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗೊಳಿಸಿರುವುದನ್ನು ವಿವರಿಸಿದರು. ಇಂದಿರಾಗಾಂಧಿಯವರ ಕೇಂದ್ರ ಸರ್ಕಾರವಾಗಲೀ, ರಾಮಕೃಷ್ಣ ಹೆಗ್ಡೆಯವರ ಕರ್ನಾಟಕ ಸರ್ಕಾರವಾಗಲೀ ಜನರ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾರದೆಂದೂ, ಜನರ ವಿಮೋಚನೆಗೆ ಮಾರ್ಕ್ಸ್‌ವಾದವೇ ಏಕಮಾತ್ರ ದಾರಿಯೆಂದು ಅವರು ಒತ್ತಿ ಹೇಳಿದರು.

ಆರಂಭದಲ್ಲಿ ಕಾ। ಕೆ. ಆರ್. ಶ್ರೀಯಾನ್ ಸ್ವಾಗತಿಸಿದರು. ಕೊನೆಯಲ್ಲಿ ಯು. ಜನಾರ್ಧನ ನಾಯ್ಕರು ಧನ್ಯವಾದ ಅರ್ಪಿಸಿದರು.

ಕಾರ್ಮಿಕ ವಿರೋಧೀ ಕಾನೂನುಗಳನ್ನು ವಿರೋಧಿಸಿ

ಮದ್ರಾಸಿನಲ್ಲಿ ಭಾರೀ ಮತ ಪ್ರದರ್ಶನ

ಎಷ್ಟೋ ರಾಜಕೀಯ ಪಕ್ಷಗಳ ಮೆರವಣಿಗೆಗಳನ್ನು, ಪ್ರದರ್ಶನಗಳನ್ನು ಕಂಡಿರುವ ಮದ್ರಾಸ್ ನಗರ ಇತ್ತೀಚಿಗೆ ಕಂಡಿರದಿದ್ದಂತಹ, ಸಂಪೂರ್ಣವಾಗಿ ಭಿನ್ನವಾದಂತಹ, ಹೊಸತನದಿಂದ ಕೂಡಿದ್ದ ಬೃಹತ್ ಕಾರ್ಮಿಕ ಪ್ರದರ್ಶನವನ್ನು ಕಳೆದ ಮಾರ್ಚ್ 30ರಂದು ಕಂಡಿತು.

ಸರ್ಕಾರದ ಕಾರ್ಮಿಕ ವಿರೋಧೀ ನೀತಿಗಳನ್ನು, ಜನ ವಿರೋಧಿ ನೀತಿಗಳನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಬೇಕೆಂದು ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ., ಐ. ಎನ್. ಟಿ. ಯು. ಸಿ. ಟಿ. ಎನ್. ಟಿ. ಯು. ಸಿ. (ಜನತಾ ಪಕ್ಷದ ಕಾರ್ಮಿಕ ವಿಭಾಗ), ಯು. ಟಿ. ಯು. ಸಿ. ಮುಂತಾದ ಕಾರ್ಮಿಕ ಸಂಘಟನೆಗಳಲ್ಲದೆ, ಡಿ. ಎಂ. ಕೆ. ಕಾಮರಾಜ್ ಕಾಂಗ್ರೆಸ್ ಪಕ್ಷಗಳ ಕಾರ್ಮಿಕ ಸಂಘಟನೆಗಳೂ ಸಂಯುಕ್ತವಾಗಿ ಕರೆ ನೀಡಿದ್ದವು.

29ರ ರಾತ್ರಿಯೇ ಇಡೀ ಮದ್ರಾಸ್ ನಗರವನ್ನು ಕೆಂಪು ತೋರಣಗಳಿಂದಲೂ, ಕೆಂಪು ಬಾವುಟಗಳಿಂದಲೂ, ಸ್ವಾಗತದ ಬ್ಯಾನರುಗಳಿಂದಲೂ ಅಲಂಕರಿಸಲಾಗಿತ್ತು. ರಾಜ್ಯದ ಎಲ್ಲಾ ಭಾಗಗಳಿಂದಲೂ ಕಾರ್ಮಿಕರು ಬಸ್ಸು-ಲಾರಿಗಳಲ್ಲಿ ಬರತೊಡಗಿದರು. ವ್ಯಾನುಗಳು, ಟೆಂಪೋಗಳು, ಆಟೋರಿಕ್ಷಾಗಳೂ ಕೂಡಾ ಪ್ರದರ್ಶನಕಾರರನ್ನು ಹೊತ್ತು ತಂದವು.

ಮಾರ್ಚ್ 30ರಂದು ಬೆಳಿಗ್ಗೆ 10 ಗಂಟೆಗೆ ಮೆರವಣಿಗೆ ಪ್ರಾರಂಭವಾಯಿತು. ರಸ್ತೆಗಳು ಸುಡುವ ಕೆಂಡಗಳಾದವು. ಟಾರು ಕರಗತೊಡಗಿತು. ಸೂರ್ಯ ಮೇಲಿನಿಂದ ಬೆಂಕಿಯನ್ನು ಸುರಿಯುತ್ತಿದ್ದ. ಆದರೆ ಕಾರ್ಮಿಕರು ಇವು ಯಾವುದನ್ನೂ ಲೆಕ್ಕಿಸದೆ ಘೋಷಣೆಗಳನ್ನು ಕೂಗುತ್ತಾ, ಹಾಡುಗಳನ್ನು ಹಾಡುತ್ತಾ ಉತ್ಸಾಹಭರಿತರಾಗಿ ಮುನ್ನಡೆದರು.

'ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ'

'ಎಲ್ಲಾ ಕಾರ್ಮಿಕ ಸಂಘಟನೆಗಳ ಐಕ್ಯತೆ ಚಿರಾಯುವಾಗಲಿ'

'ತಮಿಳುನಾಡು ಕಾರ್ಮಿಕರ ಪ್ರದರ್ಶನಕ್ಕೆ ಜಯವಾಗಲಿ'

'ಮುಷ್ಕರ ತಡೆ ಶಾಸನ ರದ್ದಾಗಲಿ'

'ಕಾರ್ಮಿಕ ವಿರೋಧೀ ಕರಾಳ ಶಾಸನಗಳಿಗೆ ಧಿಕ್ಕಾರ'

'ಕುಡಿಯುವ ನೀರಿನ ಅಭಾವಕ್ಕೆ ತುರ್ತು ಕ್ರಮ ಕೈಗೊಳ್ಳಿ'

'ಅಗತ್ಯ ವಸ್ತುಗಳು ನ್ಯಾಯಬೆಲೆಯಲ್ಲಿ ಸಿಗುವಂತೆ ಮಾಡಿ'

'ಕಾರ್ಮಿಕ ವಿವಾದಗಳಲ್ಲಿ ಪೋಲೀಸರ ಹಸ್ತಕ್ಷೇಪ ನಿಲ್ಲಲಿ'

ಮುಂತಾದ ಘೋಷಣೆಗಳು ಮುಗಿಲು ಮುಟ್ಟಿದವು. ಮೆರವಣಿಗೆ ಮುಂದೆ ಸಾಗಿತು. ದಾರಿಯಲ್ಲೊಂದು ಸಿನಿಮಾ ಟಾಕೀಸಿನ ಮುಂದೆ ಕಥಾನಾಯಕ ಕಣ್ಣುಗಳಲ್ಲಿ ಬೆಂಕಿಯುಗುಳುತ್ತಿರುವಂತಹ ದೊಡ್ಡ ಕಟ್-ಔಟ್ ಕಂಡಾಗ ಉತ್ಸಾಹಗೊಂಡ ಪ್ರದರ್ಶನಕಾರರೊಬ್ಬರು ಆದರ ಕೈಗೆ ಕೆಂಪು ಬಾವುಟವನ್ನು ಸಿಕ್ಕಿಸಿಬಿಟ್ಟರು.

ಮಧ್ಯಾಹ್ನ 12 ಗಂಟೆಗೆ ಬಹಿರಂಗ ಸಭೆ ನಡೆಯಲಿರುವ ಸ್ಥಳವನ್ನು ಮೆರವಣಿಗೆ ತಲುಪಿತು. ಸುಡುವ ಟಾರ್ ರಸ್ತೆಯುದ್ದಕ್ಕೂ ಪ್ರದರ್ಶನಕಾರರು ಕುಳಿತರು. ವಿಧಾನಸಭೆಯಿಂದ ಡಿ. ಎಂ. ಕೆ. ಪ್ರಧಾನ ಕಾರ್ಯದರ್ಶಿ ಅನ್ಬಳಗನ್. ಸಿ. ಪಿ. ಐ. (ಎಂ) ಸದಸ್ಯರಾದ ಕಾ। ಎನ್. ಶಂಕರಯ್ಯ, ಆರ್. ಉಮಾನಾಥ್, ಕೆ. ರಮಣಿ, ಎಸ್. ವರದರಾಜನ್, ಜಿ. ಹೇಮಚಂದ್ರನ್, ಎಂ. ಸೆಲ್ಲಮುತ್ತು. ಕೆ. ಆರ್. ಸುಂದರಂ ಮುಂತಾದವರು ವೇದಿಕೆಗೆ ಆಗಮಿಸಿದರು. ಸಿ.ಪಿ.ಐ. ಸದಸ್ಯರುಗಳೂ ವೇದಿಕೆಗೆ ಬಂದರು.

ಒಂದು ಕಡೆ ಬಹಿರಂಗ ಸಭೆ ನಡೆಯುತ್ತಿದ್ದರೆ ವಿಧಾನಸಭೆಯ ಒಳಗೆ ವಿರೋಧ ಪಕ್ಷಗಳ ಸದಸ್ಯರು ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿದ್ದರು. ಪ್ರದರ್ಶನಕಾರರ ಪರವಾಗಿ ಸಭಾಧ್ಯಕ್ಷರಿಗೆ ವಿರೋಧಿ ಸದಸ್ಯರು ಮನವಿ ಪತ್ರವನ್ನರ್ಪಿಸಿ, ಕಾರ್ಮಿಕರು ಎದುರಿಸುತ್ತಿರುವ ತುರ್ತು ಬೇಡಿಕೆಗಳ ಕಡೆಗೆ ಸರ್ಕಾರದ ಗಮನಸೆಳೆದರು. ಸರ್ಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧೀ, ಜನ ವಿರೋಧಿ ಧೋರಣೆಗಳನ್ನು ಬಲವಾಗಿ ಖಂಡಿಸಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ), ಸಿ. ಪಿ. ಐ. ಡಿ. ಎಂ. ಕೆ. ಮತ್ತಿತರ ಕಾರ್ಮಿಕ ಸಂಘಟನೆಗಳ ಮುಖಂಡರುಗಳು ಮಾತನಾಡಿದರು.

ರಾಯಚೂರು :

ಮಹಿಳಾ ದಿನ ಆಚರಣೆ

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಘಟಕವು ದಿನಾಂಕ 14-3-83 ರಿಂದ 19-3-83ರವರೆಗೆ ಒಂದು ವಾರ 'ಅಂತರ ರಾಷ್ಟ್ರೀಯ ದುಡಿಯುವ ಮಹಿಳೆಯ ದಿನಾಚರಣೆ'ಯನ್ನು ಆಚರಿಸಿತು. ನಗರದ ಮಡ್ಡಿಪೇಟೆ, ನೀರಭಾವಿ ಕುಂಟ, ನವರಂಗ ದರವಾಜ, ಮುಂತಾದ ಕೊಳಚೆ ಪ್ರದೇಶಗಳಲ್ಲಿ ಮಹಿಳೆಯರ ಸಭೆಗಳನ್ನು ಸೇರಿಸಿ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹತ್ವ, ಅದರ ಹುಟ್ಟು ಮತ್ತು ಬೆಳವಣಿಗೆ, ಸಮಾಜ ಬದಲಾವಣೆಯಲ್ಲಿ ಮಹಿಳೆಯರ ಪಾತ್ರ ಇತ್ಯಾದಿಗಳನ್ನೆಲ್ಲಾ ವಿವರಿಸಿ, ಒಂದೊಂದು ಮಹಿಳಾ ಸಮಿತಿಗಳನ್ನು ರಚಿಸಿತು. ಅಲ್ಲದೆ ಅಲ್ಲಿಯ ಸಮಸ್ಯೆಗಳ ಹಾಗೂ ಬೇಡಿಕೆಗಳ ಪಟ್ಟಿಯೊಂದನ್ನು ತಯಾರಿಸುವಂತೆ ಕರೆನೀಡಿತು.

19 – 3 – 83ರಂದು 6 ಗಂಟೆಗೆ ಕರ್ನಾಟಕ ಸಂಘದಲ್ಲಿ ಮುಕ್ತಾಯ ಸಮಾರಂಭ ನಡೆಯಿತು. ಆರಂಭದಲ್ಲಿ ಸಂಘಟನೆಯ ಧ್ಯೇಯೋದ್ದೇಶಗಳನ್ನು ಕುರಿತು ಸಂಘಟನೆಯ ಸಂಚಾಲಕಿ ಕಾ। ಶ್ರೀಮತಿ ಹರಿಣಿ ಕಕ್ಕೇರಿಯವರು ರಚಿಸಿದ ಹಾಡನ್ನು ಹಾಡಲಾಯಿತು. ನಂತರ ಮಾತನಾಡಿದ ಶ್ರೀಮತಿ ಲಲಿತಾ ನಾಯಕ ಹಾಗೂ ರಾಘವೇಂದ್ರ ಕುಷ್ಟಗಿಯವರು, ಶತಶತಮಾನಗಳಿಂದಲೂ ಶೋಷಣೆಗೊಳಗಾದ ಮಹಿಳೆಯರು ಇಂದು ಎಚ್ಚೆತ್ತು ಸಂಘಟನೆ ಮಾಡಿಕೊಂಡಿದ್ದಾರೆ. ಅವರಿಗೆ ನಾವು ಹೃತ್ಪೂರ್ವಕ ಬೆಂಬಲ ಕೊಡಬೇಕೆಂದು ಹೇಳಿದರು. ಈ ಸಂಘಟನೆ ಗೌರಿ ಪೂಜೆ, ಗಂಗೆ ಪೂಜೆಯಂತಹ ಕೆಲಸಗಳನ್ನು ಮಾಡದೆ ಎಲ್ಲ ಜನರ ಮೂಲಭೂತ ಸಮಸ್ಯೆಗಳಿಗಾಗಿ ಹೋರಾಡುವಂಥ ದಿಟ್ಟ ಹೆಜ್ಜೆ ಇಡಬೇಕೆಂದು ಹೇಳಿದರು.

ಭದ್ರಾ ಜಲಾಶಯದ ಬೈಪಾಸ್ ಕಾಲುವೆ ಯೋಜನೆಗಾಗಿ ರೈತರ ಉಗ್ರ ಹೋರಾಟ

ಹರಪನಹಳ್ಳಿ ತಾಲ್ಲೂಕು ಸದಾ ಬರಗಾಲದಿಂದ ಬಳಲುತ್ತಿದ್ದು ಯಾವ ತರಹದ ನೀರಾವರಿ ಯೋಜನೆಗಳಿಲ್ಲದೆ ಕನಿಷ್ಠ ಕುಡಿಯುವ ನೀರಿಗೂ ಗತಿ ಇಲ್ಲದೇ ಜನತೆ ದಾಹದಿಂದ ಬಳಲುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಭದ್ರಾ ಜಲಾಶಯದ ಯೋಜನೆ ಅನೇಕ ವರ್ಷಗಳಿಂದ ಇಲ್ಲಿನ ಜನತೆಯ ದಾಹ ತಣಿಸಲು ಸಾಧ್ಯವಾಗದೆ ಉಳಿದಿದೆ. 1982ರಲ್ಲೇ ಪೂರ್ಣಗೊಳ್ಳಬೇಕಾಗಿದ್ದ ಈ ಯೋಜನೆ ಅನೇಕ ರಾಜಕೀಯ ಮತ್ತು ಅಧಿಕಾರಿ ವರ್ಗಗಳ ಹಿತಾಸಕ್ತಿಗಳಿಂದಾಗಿ ಜನತೆಯನ್ನು ವಂಚಿಸಿ ಜನತೆಯ ನಿರೀಕ್ಷೆಗೆ ಕೊಡಲಿ ಪೆಟ್ಟು ಬಿದ್ದಿದೆ. ರೈತರು ಎಚ್ಚೆತ್ತಿದ್ದಾರೆ. ಉಗ್ರ ಹೋರಾಟಕ್ಕೆ ಅಣಿಯಾಗಿದ್ದಾರೆ. ರೈತ ಸಂಘದ ಕಾರ್ಯಕರ್ತರಿಂದ ಹಳ್ಳಿ ಹಳ್ಳಿಯಲ್ಲಿ ಬಹಿರಂಗ ಸಭೆಗಳು, ಸದಸ್ಯತ್ವದ ಕಾರ್ಯಕ್ರಮ ಶೀಘ್ರವಾಗಿ ನಡೆಯುತ್ತಿದೆ. ದಿನಾಂಕ 19-3-83 ರಂದು ಹೋರಾಟ ಸಮಿತಿ ರಚನೆಯಾಗಿದೆಯೆಂದು ಸಂಚಾಲಕ ಕಾ। ಪಿ.ಆರ್. ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾಂಡೇಲಿ :

ಮಾಲೀಕರ ನಿರ್ಲಕ್ಷತೆಗೆ ಮೂವರು ಕಾರ್ಮಿಕರ ಬಲಿ

ದಿನಾಂಕ 24-3-83 ನೇ ಸಾಯಂಕಾಲ ರಾತ್ರಿ ಸುಮಾರು 7-30 ಘಂಟೆಗೆ ದಾಂಡೇಲಿ ಫೇರೊ ಅಲಾಯ್ಸ್ ಕಾರಖಾನೆಯಲ್ಲಿ ಹೊಸ ಕುಲುಮೆಯನ್ನು ಸ್ವಚ್ಛ ಮಾಡುವ ಸಮಯದಲ್ಲಿ ಅರಗಿನ ವಿಷ ವಾಯುವಿನಿಂದ 3 ಜನ ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟರಲ್ಲದೆ ಇನ್ನೊಬ್ಬರನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಸೇರಿಸಲಾಗಿದೆ. ಇದನ್ನು ಪ್ರತಿಭಟಿಸಿ ಅದೇ ರಾತ್ರಿ ಸುಮಾರು 8-00 ಘಂಟೆಯಿಂದ ಕಂಪನಿಯಲ್ಲಿ ಕೆಲಸಮಾಡುವಂತ ಕಾರ್ಮಿಕರು ಕೆಲಸವನ್ನು ನಿಲ್ಲಿಸಿದರು. ಇದರ ಫಲವಾಗಿ ಮರುದಿನ ಉ. ಕನ್ನಡ ಜಿಲ್ಲೆಯ ಡೆಪ್ಯುಟಿ ಕಮಿಶನರ್, ಸುಪರಿಡೆಂಟ್ ಆಫ್ ಪೋಲಿಸ್ ಹಾಗೂ ಎ. ಸಿ. ಮತ್ತು ಡಿ.ಎಸ್.ಪಿ. ರವರ ಸಮ್ಮುಖದಲ್ಲಿ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬರಲಾಯಿತು. ಅಪಘಾತದಲ್ಲಿ ಮೃತಪಟ್ಟಂತ ಪ್ರತಿ ಕಾರ್ಮಿಕನ ಕುಟುಂಬಕ್ಕೆ ಪರಿಹಾರವೆಂದು 30 (ಮೂವತ್ತು) ಸಾವಿರ ರೂಪಾಯಿಯನ್ನು ಕೊಡಬೇಕೆಂತಲೂ ಹಾಗೂ ಅವರ ಮಕ್ಕಳಿಗೆ ಪುಕ್ಕಟೆಯಾಗಿ ಶಿಕ್ಷಣ ಹಾಗೂ ಔಷಧೋಪಚಾರವನ್ನು ಒದಗಿಸಬೇಕೆಂತಲೂ ಅದರಂತೆ ಅವರ ಮಕ್ಕಳು ದೊಡ್ಡವರಾದ ಮೇಲೆ ಒಬ್ಬನಿಗೆ ಕಂಪನಿಯಲ್ಲಿ ಕೆಲಸವನ್ನು ಕೊಡಬೇಕೆಂದು ಆಡಳಿತ ವರ್ಗದವರ ಸಮ್ಮುಖದಲ್ಲಿ ಒಪ್ಪಂದವಾಯಿತು. ಮಾತುಕತೆಯಲ್ಲಿ ಕಾರ್ಮಿಕ ಸಂಘದ ಪರವಾಗಿ ಕಾ. ಟಿ. ಎಸ್. ನಾಯ್ಕ, ವ್ಹಿ. ಎನ್. ರೆಡ್ಡಿ ಹಾಗೂ ಆರ್. ಎಲ್. ರೆಗೊ ಭಾಗವಹಿಸಿ ಒಪ್ಪಂದಕ್ಕೆ ಸಹಿಹಾಕಲಾಯಿತು.

25-3-83 ರಂದು ರಾತ್ರಿ 10-00 ಘಂಟೆಗೆ ಪುನಃ ಕಾರಖಾನೆಯು ಪ್ರಾರಂಭವಾಗಿ ಪ್ರಜ್ಞಾಹೀನನಾದಂತ ಕಾರ್ಮಿಕನು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವುದಾಗಿ ವರದಿಯಾಗಿದೆ.

ಬೆಂಗಳೂರು

ಬೀಡಿ ಕಾರ್ಮಿಕರ ಯಶಸ್ವೀ ಹೋರಾಟ

ಕೀಳು ದರ್ಜೆಯ ಬೀಡಿಕಟ್ಟುವ ಎಲೆಯನ್ನು ಒದಗಿಸಿ ಕಾರ್ಮಿಕರನ್ನು ವಂಚಿಸುತ್ತಿದ್ದುದನ್ನು ಪ್ರತಿಭಟಿಸಿ ಮಾರ್ಚ್ 31ರಂದು ಭಾರತ್ ಬೀಡಿ ವರ್ಕ್ಸ್‌ನ ಬೆಂಗಳೂರು ಡಿಪೋದ ಬೀಡಿ ಕಾರ್ಮಿಕರು ಆಡಳಿತ ವರ್ಗವನ್ನು ಘೇರಾವ್ ಮಾಡಿದಾಗ ಕಾರ್ಮಿಕರ ಬೇಡಿಕೆಯನ್ನು ಆಡಳಿತವರ್ಗ ಈಡೇರಿಸಿತೆಂದು ವರದಿಯಾಗಿದೆ ಇದರ ಮುಖಂಡತ್ವವನ್ನು ಕಾ. ಅಬ್ದುಲ್ ಜಲೀಲ್, ಮಹಮ್ಮದ್ ಯೂಸುಫ್ ಮತ್ತು ಬೀಬಿಜಾನ್ ವಹಿಸಿದ್ದರು.

ಪಿ. ಜಿ. ಪ್ಲೈವುಡ್ ಕಾರ್ಮಿಕರಿಗೆ ಕೂಲಿ, ಬೋನಸ್ಸಿನಲ್ಲಿ ಹೆಚ್ಚಳ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಪಿ. ಜಿ. ಪ್ಲೈವುಡ್ ಕಾರ್ಮಿಕರು ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ನೇತೃತ್ವದಲ್ಲಿ ಸಂಘಟಿತರಾಗಿ, ತಮ್ಮ ಮುಖ್ಯ ಬೇಡಿಕೆಗಳನ್ನು ಸಂಘದ ಮೂಲಕ ಮಾಲೀಕರಿಗೆ ಕಳುಹಿಸಿದ್ದರು. ಈ ಹಿಂದೆ ಕಾರ್ಖಾನೆ ತಿಂಗಳುಗಟ್ಟಲೆ ಮುಚ್ಚಲ್ಪಟ್ಟಿದ್ದನ್ನು ವಿರೋಧಿಸಿ, ಸಂಘದಿಂದ "ಲಾಕ್‌ಔಟ್"ನ್ನು ಹಿಂತೆಗೆದುಕೊಂಡು ಎಲ್ಲರಿಗೂ ಕೆಲಸ ಕೊಡಬೇಕೆಂದು ಒತ್ತಾಯಪಡಿಸಲಾಗಿತ್ತು. ಅದರ ಪರಿಣಾಮವಾಗಿ ಲಾಕ್‌ಔಟ್‌ನ್ನು ಮೆನೇಜ್‌ಮೆಂಟ್ ಹಿಂತೆಗೆದುಕೊಂಡು ಪುನಃ ಎಲ್ಲರಿಗೂ ಕೆಲಸ ದೊರಕಿತು. ಅನಂತರ ಕೇಳಿಕೆಗಳನ್ನು ಮುಂದಿಟ್ಟು ಮೇನೇಜ್‌ಮೆಂಟನ್ನು ಒತ್ತಾಯಿಸಿದ ಪರಿಣಾಮವಾಗಿ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಸಮಕ್ಷಮ ಮಾತುಕತೆ ನಡೆದು ತಾ। 19-3-1983 ರಂದು ಕೂಲಿ, ಬೋನಸ್ ಮತ್ತು ಇತರ ಸೌಲತ್ತುಗಳ ಹೆಚ್ಚಳಕ್ಕೆ ಒಪ್ಪಿ 3 ವರ್ಷಗಳ ಅವಧಿಯ ಒಪ್ಪಂದವಾಯಿತು.

ಅಸಿಸ್ಟೆಂಟ್ ಲೇಬರ್ ಕಮೀಷನರ್ ಇವರ ಸಮಕ್ಷಮ ನಡೆದ ಮಾತುಕತೆಯಲ್ಲಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾದ ಕಾ। ಕೆ. ಮೂಸಬ್ಬ, ಪ್ರಧಾನ ಕಾರ್ಯದರ್ಶಿಯವರಾದ ಕಾ। ಕೆ. ಶಂಕರ್, ಸಂಘದ ಸಮಿತಿ ಸದಸ್ಯರಾದ ಕಾ। ರಾಜೇಂದ್ರ ಹಾಗೂ ಇತರ ಮುಖ್ಯ ಕಾರ್ಯಕರ್ತರು ಭಾಗವಹಿಸಿದ್ದರು.

ಅಜೀಜ್ ಸೇಟ್‌ರ ಎಚ್ಚರಿಕೆ

(ಒಂದನೇ ಪುಟದಿಂದ)

ಬರಬೇಕು. ಆದಾಗ ಬೇಕಾದರೆ ಉತ್ಪಾದನಾ ಸಾಧನೆಗಳೆಲ್ಲ ಸಮಾಜದ ಸೊತ್ತಾಗಬೇಕು. ಹಾಗಾದರೆ ಮಾತ್ರ ಸುಲಿಗೆ ಬಂದಾಗಿ, ಪ್ರತಿಯೊಬ್ಬರೊಳಗೆ ಸ್ನೇಹ ಬಂಧುತ್ವದ ಸಂಬಂಧ ಬೆಳೆಯಲು ಸಾಧ್ಯ. ಸಮಾಜದಲ್ಲಿ ಉತ್ಪಾದನಾ ಸಾಧನಗಳು ಬೆಳೆದಂತೆ, ಯೋಜನೆಗನುಸಾರವಾಗಿ ಉತ್ಪಾದನಾ ಸಂಬಂಧಗಳು ಸರಿಯಾಗಿ ರೂಪುಗೊಳ್ಳುತ್ತವೆ. ಸಮಾಜವಾದಿ ಸಮಾಜದಲ್ಲಿ ಮಾತ್ರ ಅದು ಸಾಧ್ಯ.

ಮಾಜಿ ಸಮತಾವಾದಿಯಾಗಿದ್ದ ಅಜೀಜ್‌ಸೇಟರು ಬಹುಶಃ ಈ ಸಿದ್ಧಾಂತಗಳನ್ನು ಮರೆತಂತೆ ಕಂಡು ಬರುತ್ತದೆ. ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕರ ಹೋರಾಟ ಅನಿವಾರ್ಯವೆಂಬುದನ್ನು ಹಳೇ ಕಾರ್ಮಿಕ ಮುಖಂಡ ಈಗಿನ ಕಾರ್ಮಿಕ ಮಂತ್ರಿ ಅಜೀಜ್ ಸೇಟರು ನೆನೆಸಿಕೊಳ್ಳುವುದು ಅಗತ್ಯ.

ಕಾರ್ಮಿಕರ ಸಂಘಟಿತ, ಶಿಸ್ತುಬದ್ಧ ಹೋರಾಟ ನಡೆಯುತ್ತಲೇ ಇರಬೇಕು. ಬಲಶಾಲಿಯಾದ ಕಾರ್ಮಿಕರ ರಾಜಕೀಯ ಪಕ್ಷ ಬೆಳೆದು ಬರಲೇಬೇಕು. ಬಂಡವಾಳಶಾಹಿ ಸಮಾಜ ಪದ್ಧತಿಯನ್ನು ಕೊನೆಗೊಳಿಸಲು ಹೋರಾಟ ನಡೆಯಲೇಬೇಕು. ಸಮತಾವಾದಿ ಸಮಾಜ ರಚನೆಯಾಗಲೇಬೇಕು. ಆಗ ಮಾತ್ರ ಕಾರ್ಮಿಕ ಮಂತ್ರಿ ಅಜೀಜ್ ಸೇಟ್, ಗುಂಡಯ್ಯಶೆಟ್ಟಿ ಹಾಗೆಯೇ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರ ಸಿಗಲು ಸಾಧ್ಯ.

ಬೀಡಿ ಕಾರ್ಮಿಕರ ಸಭೆ

ಮಂಗಳೂರು ತಾಲ್ಲೂಕು ಪಡುಬೊಂಡತಿಲ ಪ್ರದೇಶದ ಬೀಡಿ ಕಾರ್ಮಿಕರ ಸಭೆಯೊಂದು ತಾ। 11-3-83 ರಂದು ಕಾ। ಕೆ. ಆರ್. ಶ್ರೀಯಾನರ ಅಧ್ಯಕ್ಷತೆಯಲ್ಲಿ ಜರುಗಿತು. ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾ। ಕೆ. ಬಾಬು ದೇವಾಡಿಗರು ಸ್ವಾಗತಿಸಿ ಬೀಡಿ ಮಜೂರರ ಸಂಘಟನೆಯ ಬಗ್ಗೆ ಮಾತನಾಡಿದರು.

ಅಧ್ಯಕ್ಷರು ಮಾತನಾಡುತ್ತಾ, ಬೀಡಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಅಭ್ಯಸಿಸಿ ಅದರ ಪರಿಹಾರಕ್ಕಾಗಿ ಸಂಘಟನೆ ವಿಸ್ತರಿಸಿ ಚಳವಳಿ ನಡೆಸಬೇಕೆಂದೂ ತಾ। 24-3-83ರಂದು ನಡೆಯಲಿರುವ ಬೃಹತ್ ಪ್ರದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಭಾಗವಹಿಸಬೇಕೆಂದೂ, ಕನಿಷ್ಠ ಕೂಲಿ ಪುನರ್ವಿಮರ್ಶಿಸಿ ಸರಕಾರ ಕೂಡಲೇ ಜಾರಿಗೆ ತರುವಂತೆ ಒತ್ತಾಯಿಸಬೇಕೆಂದೂ ವಿನಂತಿಸಿದರು. ಕೊನೆಗೆ ಕಾ। ಬಾಬುದೇವಾಡಿಗರು ಧನ್ಯವಾದಗಳನ್ನರ್ಪಿಸಿದರು.

"ಮಾರ್ಕ್ಸ್‌ರ ಜೀವನದಲ್ಲಿ ಒಂದು ದಿನ"

(ಮೂರನೇ ಪುಟದಿಂದ)

ಆತ್ಮೀಯ ಸ್ನೇಹಿತರೆ, ನಾವು ಇಲ್ಲಿ ಕಳೆದ ಒಂದು ದಿನದ ಜೀವನವನ್ನು ಇಷ್ಟರಮಟ್ಟಿಗೆ ವಿವರಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಬೇಡುತ್ತೇನೆ. ಈ ರೀತಿ ವರ್ಣಿಸಿ ಬರೆಯುವುದು ಸರಿಯಲ್ಲವೆಂದೂ ಸಹ ನನಗೆ ಗೊತ್ತು. ಆದರೆ ಈ ಸಂಜೆ ಸಮಯದಲ್ಲಿ ನನ್ನ ಹೃದಯ ಚೂರು ಚೂರಾಗಿ ಒಡೆದುಹೋಗಿದೆ, ನಾನೇನು ಮಾಡಲಿ ? ನನ್ನ ಹೃದಯದ ಭಾರವನ್ನು ಕುರಿತು, ಒಂದು ಸಲವಾದರು ನನ್ನ ಆತ್ಮೀಯ ಸ್ನೇಹಿತರಾದ ತಮ್ಮಲ್ಲಿ ಹೇಳಿಕೊಳ್ಳಬೇಕೆನಿಸಿದೆ. ಬೇರೆ ದಾರಿಯೇ ಕಾಣಿಸುತ್ತಿಲ್ಲ. ಆದರೆ ಇಂಥ ತೊಂದರೆಗಳಿಂದಾಗಿ ನನ್ನ ಧೈರ್ಯ ಕುಗ್ಗಿತು ಎಂದು ಮಾತ್ರ ಭಾವಿಸಬೇಡಿ. ನಾವು ನಡೆಸುತ್ತಿರುವ ಹೋರಾಟ ಓರ್ವ ವ್ಯಕ್ತಿಯ ಹೋರಾಟವಲ್ಲ ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ನನ್ನ ಆಳವಾದ ಪ್ರೀತಿಗೂ, ಪ್ರೇಮಕ್ಕೂ, ವಾತ್ಸಲ್ಯಕ್ಕೂ, ಕಾರಣರಾದ ನನ್ನ ಪತಿಯು ನನ್ನ ಬಳಿ ಇದ್ದಾರೆಂಬುದಷ್ಟೆ ನನಗೆ ಸಾಕು. ಆದರೆ ಅವರು ಕೂಡ ವ್ಯಥೆ ಪಡುವುದು ನನ್ನನ್ನು ಚಿತ್ರಹಿಂಸೆಗೊಳಿಸುತ್ತಿದೆ. ನನ್ನ ಕಣ್ಣುಗಳಿಂದ ರಕ್ತ ಸುರಿಯುತ್ತಿದೆ. ನನ್ನ ಹೃದಯ ನೋವನ್ನು ಅನುಭವಿಸುತ್ತಿದೆ. ಎಷ್ಟೋ ಜನರಿಗೆ ಧಾರಾಳವಾಗಿ ಸಹಾಯ ಮಾಡಿದ್ದರು. ಅವರಲ್ಲಿ ಯಾರೊಬ್ಬರೂ ಸಹಾಯ ಮಾಡಲು ಮುಂದೆ ಬಾರದೆ ಇರುವುದು ಆಶ್ಚರ್ಯವುಂಟುಮಾಡುತ್ತದೆಯಲ್ಲವೆ? ಅವರು ಅತ್ಯಂತ ವೇದನೆಯಿಂದ ಇರುವುದನ್ನು ನೋಡಿದಾಗ ನನ್ನ ಹೃದಯ ಕರಗಿ ಹೋಗುತ್ತದೆ. ಇದರಿಂದಾಗಿ ವೆಡಮೇಯರ್ ಅವರೆ, ನಾವು ಯಾರನ್ನೂ ಭಿಕ್ಷೆ ಕೇಳುವೆವು ಎಂದು ಮಾತ್ರ ಭಾವಿಸಬೇಡಿ. ನನ್ನ ಪತಿ ಯಾರಿಗೆ ಉಪಕಾರ ಮಾಡಿದರೋ, ಯಾರಿಗಾಗಿ ತನ್ನ ಚಿಂತನೆ ಮತ್ತು ಸ್ಫೂರ್ತಿಯನ್ನು ನೀಡಿದರೋ ಅಂತಹವರಿಂದ ಸಹಾಯವನ್ನು ಎದುರು ನೋಡುವುದು ತಪ್ಪಲ್ಲವೆಂದು ನಾನು ಭಾವಿಸುತ್ತೇನೆ.

ಆದರೆ ನನ್ನ ಪತಿ ಬೇರೆ ರೀತಿಯಲ್ಲಿ ಯೋಚಿಸುತ್ತಿದ್ದಾರೆ. ಬಹಳ ಭಯಂಕರವಾದ ಸಂದರ್ಭಗಳಲ್ಲಿಯೂ ಕೂಡ ಮುಂದಿನ ಭವಿಷ್ಯವನ್ನು ಕುರಿತು ತಮ್ಮ ನಂಬಿಕೆಯನ್ನು ಕಳೆದುಕೊಂಡಿಲ್ಲ. ನಾನು ಸಂತೋಷವಾಗಿರುವಾಗಲು, ಮಕ್ಕಳು ನನ್ನನ್ನು ಆಲಂಗಿಸಿರುವುದನ್ನು ನೋಡುವಾಗಲೂ, ಅವರು ಬಹಳ ಪರವಶರಾಗಿ ದುಃಖ ಮರೆತು ಬಿಡುತ್ತಾರೆ. ವೆಡಮೇಯರ್‌ರವರೆ, ನಾನು ತಮಗೆ ಇಂಥ ದೊಡ್ಡ ಕಾಗದ ಬರೆದಿರುವುದು ಅವರಿಗೆ ತಿಳಿಯದು. ಇದನ್ನು ಕುರಿತು ಅವರಿಗೆ ತಿಳಿಸುವುದು ಬೇಡ. ನಮಗೆ ಸೇರಬೇಕಾದ ಹಣವನ್ನು ಬೇಗನೆ ವಸೂಲಿ ಮಾಡಿ ಕಳುಹಿಸಿಕೊಡಬೇಕೆಂದು ಮಾತ್ರ ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಆತ್ಮೀಯ ಸ್ನೇಹಿತರೆ, ಇನ್ನು ಈ ಕಾಗದವನ್ನು ಮುಕ್ತಾಯಗೊಳಿಸಲಿದ್ದೇನೆ. ತಮ್ಮ ಪತ್ನಿಯವರಿಗೆ, ನನ್ನ ಪ್ರೀತಿ ಪೂರ್ವಕ ನೆನಪುಗಳನ್ನು ತಿಳಿಸಿ. ನಮ್ಮ ಮೂವರು ಮಕ್ಕಳು ಚೆನ್ನಾಗಿದ್ದಾರೆ. ಆರೋಗ್ಯದಿಂದಲೂ, ಉತ್ಸಾಹದಿಂದಲೂ ಇದ್ದಾರೆ. ಕೊನೆಯ ಮಗುವಿನ ತಲೆಯಲ್ಲಿ ಹುಟ್ಟುವ ಅಭಿಪ್ರಾಯಗಳೆಲ್ಲ ತುಂಬಾ ಹಲಕರವಾಗಿವೆ. ಅವನು ದಿನವೆಲ್ಲ ಯಾವುದೋ ಒಂದನ್ನು ಕೀರಲು ಗಂಟಲಿನಿಂದ ಹಾಡುತ್ತಲೆ ಇರುತ್ತಾನೆ. ಅವನು "ಪ್ರ್ಯಾಲಿಕ್ರಾತ್ಸ್" ಬರೆದ "ಮಾರ್‌ಸೆಲ್" ಗೀತೆಗಳನ್ನು ಹಾಡುವಾಗ ಮನೆಯು ಅಲ್ಲೋಲಕಲ್ಲೋಲವಾಗುತ್ತದೆ.

ಇಲ್ಲಿಗೆ ನನ್ನ ಪತ್ರವನ್ನು ಮುಗಿಸುತ್ತೇನೆ.

ತಮ್ಮ ಆತ್ಮೀಯ

ಜೆನ್ನಿ ಮಾರ್ಕ್ಸ್

ಕೃಪೆ : 'ಸೆಮ್ಮಲರ್' ತಮಿಳು ಮಾಸಪತ್ರಿಕೆ

ಅನುವಾದ : ಬಿ.ಕಾ. ಮುರ್ತೀಶ್ವರಯ್ಯ, ರಾಜಗೋಪಾಲ್ ಮತ್ತು ಅರಸು.

ಮಂಜೇಶ್ವರ :

ಮಹಿಳಾ ಸಮ್ಮೇಳನ

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮಂಜೇಶ್ವರ ಪ್ರದೇಶ ಸಮ್ಮೇಳನವು ಮಾರ್ಚ್ 27ರಂದು ಕುಂಬಳೆ ಸರಕಾರಿ ಶಾಲೆಯಲ್ಲಿ ನಡೆಯಿತು. ಸಮ್ಮೇಳನದಲ್ಲಿ ವಿವಿಧ ಭಾಗಗಳಿಂದ ಒಟ್ಟು 173 ಮಂದಿ ಪ್ರತಿನಿಧಿಗಳು ಬಂದಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಕಾ॥ ದೇವಕಿ ವಾರಿಯರ್‌ರವರು ಈ ಸಮಾಜದಲ್ಲಿ ಸ್ತ್ರೀಯರ ಮೇಲಾಗುತ್ತಿರುವ ದೌರ್ಜನ್ಯ, ಶೋಷಣೆಯನ್ನು ಸಂಘಟಿತರಾಗಿ ವಿರೋಧಿಸಬೇಕು. ಹೊಸ ಸಮಾಜ ರಚನೆಗಾಗಿ, ಸಮಾಜವಾದಿ ಸಮಾಜದ ವ್ಯವಸ್ಥೆಗಾಗಿ ನಡೆಯುವ ಹೋರಾಟದಲ್ಲಿ ಮಹಿಳೆಯರು ಸಕ್ರಿಯರಾಗಿ ಭಾಗವಹಿಸಬೇಕು ಎಂದು ಕರೆಯಿತ್ತರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕಣ್ಣಾನೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ॥ ವಿ. ಸರೋಜಿನಿ ಅವರು ನಮ್ಮ ಸಂಘಟನೆಯು ಪುರುಷರ ವಿರುದ್ಧವಾದ ಸಂಘಟನೆಯಲ್ಲಬದಲು ಸ್ತ್ರೀಯರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಯುವಂತೆ ಮಾಡುವ, ಸ್ತ್ರೀಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯ ಅನಾಚಾರಗಳನ್ನು, ಕೀಳುಭಾವನೆಗಳ ವಿರುದ್ಧ ವಿರುದ್ಧ ಹೋರಾಡುವ ಸಕ್ರಿಯ ಸಂಘಟನೆ ಎಂದರು. ಸಮತಾವಾದೀ ರಾಷ್ಟ್ರಗಳಲ್ಲಿ ಸ್ತ್ರೀಯರು ಅನುಭವಿಸುತ್ತಿರುವಂಥ ಸವಲತ್ತುಗಳನ್ನು ವಿವರಿಸಿದ ಅವರು, ಸಮಾಜವಾದೀ ಸಮಾಜದಲ್ಲಿ ಮಾತ್ರ ಸ್ತ್ರೀಯರಿಗೆ ನಿಜವಾದ ಸ್ವಾತಂತ್ರ್ಯ ಸಿಗಲು ಸಾಧ್ಯ ಎಂದು ಹೇಳಿದರು.

ನಂತರ ಮಾತನಾಡಿದ ಕಾಮ್ರೇಡ್ ಯಶೋದ ಪಳಿಗೆರೆ ಅವರು ಆದಿಮಾನವನಿಂದ ಇಂದಿನವರೆಗೆ ಜರುಗಿದ ಸಮಾಜ ಬದಲಾವಣೆಗಳನ್ನು ವಿವರಿಸಿ ಯಾವ ರೀತಿಯಲ್ಲಿ ಖಾಸಗೀ ಆಸ್ತಿಯು ಸ್ತ್ರೀಯರ ಸ್ವಾತಂತ್ರ್ಯವನ್ನು ಕಸಿಯಿತು ಎಂದು ವಿವರಿಸಿದರು. ಉತ್ಪಾದನಾ ಸಂಬಂಧದಲ್ಲಿನ ಬದಲಾವಣೆಯಿಂದ ಅಂದರೆ ಬಂಡವಾಳಶಾಹಿ ಸಮಾಜದ ನಿರ್ಮೂಲನದಿಂದ ಮಾತ್ರ ಸ್ತ್ರೀವಿಮೋಚನೆ ಸಾಧ್ಯ ಎಂದರು.

ಅನಂತರ ಕಾ॥ ರಮಣಿ, ಕುಂಬಳೆ ಇವರು ಕಾರ್ಯದರ್ಶಿಯಾಗುಳ್ಳ ಹೊಸ ಸಮಿತಿಯೊಂದನ್ನು ಆರಿಸಲಾಯಿತು. ಆರಂಭದಲ್ಲಿ ಸ್ತ್ರೀಯರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿದ್ದರು.

ಉಳ್ಳಾಲ ಗ್ರಾಮ ರೈತ ಸಂಘದ ಸಭೆ

ತಾ. 16-3-83 ರಂದು ಉಳ್ಳಾಲ ಗ್ರಾಮ ರೈತ ಸಂಘದ ಸಭೆಯು ಶ್ರೀ ಯು. ಪಿ. ಡಿಸೋಜರ ಅಧ್ಯಕ್ಷತೆಯಲ್ಲಿ ಜರಗಿತು.

ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಬಗ್ಗೆ ಚರ್ಚೆ ನಡೆದು ಇದೆ. ಮಾರ್ಚ್ ತಿಂಗಳೊಳಗೆ ಪೂರ್ತಿಗೊಳಿಸಬೇಕೆಂದು ನಿರ್ಧರಿಸಲಾಯಿತು.

ಗ್ರಾಮದಲ್ಲಿ ಸಾರ್ವಜನಿಕ ಕೆಲಸಗಳು ನಡೆಯಬೇಕಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಕರ್ನಾಟಕ ಸರಕಾರದ ಮಾನ್ಯ ಮಂತ್ರಿ ಶ್ರೀ ದೇವೇಗೌಡರಿಗೂ ಸ್ಥಳೀಯ ಎಂ.ಎಲ್.ಎ. ಕಾ॥ ಪಿ. ರಾಮಚಂದ್ರರಾವ್ ಇವರಿಗೂ ಮನವಿ ಕಳುಹಿಸಿದುದನ್ನು ಸಭೆಯು ಗಮನಿಸಿ, ಈ ಕೆಲಸಗಳನ್ನು ಕೂಡಲೇ ನಡೆಸುವಂತೆ ಮುಂದಿನ ಒತ್ತಾಯ ನಡೆಸಲು ತೀರ್ಮಾನಿಸಲಾಯಿತು.

ಹಾಗೂ ಗ್ರಾಮ ರೈತ ಸಂಘಕ್ಕೆ 13 ಮಂದಿಯಿರುವ ಹೊಸ ಸಮಿತಿಯನ್ನು ರಚಿಸಿ, ಶ್ರೀ ಗಂಗಾಧರಶೆಟ್ಟಿ ಅಧ್ಯಕ್ಷರಾಗಿಯೂ ಶ್ರೀ ವಿಠಲ ಶ್ರೀಯಾನ್ ಅವರನ್ನು ಸೆಕ್ರೆಟರಿಯಾಗಿಯೂ ಶ್ರೀ ಯು. ವಿಶ್ವನಾಥ ಅವರನ್ನು ಜತೆ ಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು.

ಉಡುಪಿಯಲ್ಲಿ :

ಪ್ರೆಸ್ ಕಾರ್ಮಿಕರ ಯಶಸ್ವಿ ಹೋರಾಟ

ದ.ಕ. ಜಿಲ್ಲೆಯ ಉಡುಪಿಯಲ್ಲಿರುವ ಪ್ರೆಸ್ ಕಾರ್ಮಿಕರು ಇಷ್ಟರವರೆಗೆ ಅಸಂಘಟಿತರಾಗಿದ್ದು ಇತ್ತೀಚೆಗಷ್ಟೇ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ನೇತೃತ್ವದಲ್ಲಿ ಸಂಘಟಿತರಾಗಿ ಕೆಲವು ಕಾನೂನುಬದ್ಧ ಸವಲತ್ತುಗಳನ್ನು ಪಡೆಯಲು ತನ್ಮೂಲಕ ಪ್ರಯತ್ನಿಸುತ್ತಿದ್ದಾರೆ.

ಇತ್ತೀಚೆಗೆ ಲಕ್ಷ್ಮೀ ಪ್ರಿಂಟರ್ಸ್‌ನ ಮಾಲೀಕರಲ್ಲಿ ಕನಿಷ್ಠ ಬೋನಸ್ ಕೊಡಬೇಕೆಂದು ಯೂನಿಯನ್ ಬೇಡಿಕೆ ಇಟ್ಟಾಗ ಆ ಪ್ರೆಸ್ಸಿನ ಮೇನೇಜ್‌ಮೆಂಟ್ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುವ ಧೋರಣೆಯಂತೆ ಯೂನಿಯನ್ನಿನ ಇಬ್ಬರು ಮುಖ್ಯ ಕಾರ್ಯಕರ್ತರಾದ ಶ್ರೀ ಕೃಷ್ಣಮೂರ್ತಿ ರಾವ್ ಮತ್ತು ಶ್ರೀರಮೇಶ್‌ಮುಡನೇ ಇವರನ್ನು ವಿನಾಕಾರಣ ಕೆಲಸದಿಂದ ಸಸ್ಪೆಂಡ್ ಮಾಡಿತು. ಇದನ್ನು ಪ್ರತಿಭಟಿಸಿ ಸದ್ರಿ ಪ್ರೆಸ್ ಕಾರ್ಮಿಕರು ಮುಷ್ಕರ ನಡೆಸಿದರು. ಸದ್ರಿ ಮೇನೇಜ್‌ಮೆಂಟ್ ಯೂನಿಯನ್ ಮುಖಂಡರೊಡನೆ ಮಾತುಕತೆ ನಡೆಸಿ ಸಸ್ಪೆಂಡ್ ಮಾಡಿ ಪ್ರೆಸ್ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ಸೇರಿಸುವ ಒಪ್ಪಂದಕ್ಕೆ ಸಹಿ ಹಾಕಿತು. ಬೋನಸ್ ವಿವಾದವು ಲೇಬರ್ ಆಫೀಸಿನಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ.

ಇದೇ ರೀತಿ ಗಣೇಶ್ ಪ್ರಿಂಟರ್ಸ್‌ನ (ಉಡುಪಿ) ಮಾಲಿಕರು ಸರಿಯಾದ ದಾಖಲೆ ಪತ್ರ ಇಡದ ಕಾರಣ ಕಾರ್ಮಿಕ ನಿರೀಕ್ಷಕರರಿಗೆ ದೂರು ಕೊಟ್ಟ ಕಾರಣ ಸದ್ರಿ ಮೇನೇಜ್‌ಮೆಂಟ್ ತನ್ನ ಕಾರ್ಮಿಕರಾದ ಕುಮಾರಿ ಶಾರದಾ ಮತ್ತು ಕುಮಾರಿ ಜಾನೆಟ್ ಹಾಗೂ ಶ್ರೀ ಗಣಪತಿರಾವ್ ಎಂಬ ಮೂವರನ್ನು ವಜಾ ಮಾಡಿತು. ಇದನ್ನು ಪ್ರತಿಭಟಿಸಿ ಅಲ್ಲಿಯ ಕಾರ್ಮಿಕರು ಹಾಗೂ ಆಸುಪಾಸಿನ ಪ್ರೆಸ್ ಕಾರ್ಮಿಕರು ಸದ್ರಿ ಪ್ರೆಸ್ಸಿನ ಮುಂದೆ ಮತ ಪ್ರದರ್ಶನ ನಡೆಸಿದ ಕಾರಣ ಸದ್ರಿ ಮೇನೇಜ್‌ಮೆಂಟ್ ಯೂನಿಯನ್ನಿನ ಮುಂದಾಳುಗಳೊಡನೆ ಮಾತುಕತೆ ನಡೆಸಿ ವಜಾ ಮಾಡಿದ ಕಾರ್ಮಿಕರನ್ನು ಬೇಷರತ್ತಾಗಿ ಪುನಃ ಕೆಲಸಕ್ಕೆ ತೆಗೆದುಕೊಂಡಿತು.

ಈ ಎರಡೂ ವಿವಾದಗಳಲ್ಲಿ ಯೂನಿಯನ್ನಿನ ಪರವಾಗಿ ಕಾರ್ಯದರ್ಶಿ ಕಾ. ಬಿ. ಭುಜಂಗ ಮಾರ್ಲರು ಹಾಗೂ ಉಡುಪಿ ಡಿವಿಜನ್ನಿನ ಸಲಹೆಗಾರರಾದ ಕಾ. ವಿಶ್ವನಾಥ ರೈ ಮಾತುಕತೆ ನಡೆಸಿದ್ದರು.

ಬದಲಾಗಿರುವ ರಾಜಕೀಯ ಹಿನ್ನಲೆಯಲ್ಲಿ ಜಿಲ್ಲೆಯ ಎಲ್ಲಾ ಪ್ರೆಸ್ ಕಾರ್ಮಿಕರೂ ಸಂಘಟಿತರಾಗಿ ತಮಗೆ ಸಿಗಬೇಕಾದ ಸವಲತ್ತುಗಳನ್ನು ಪಡೆಯಲು ಮುಂದಾಗಬೇಕೆಂದು ಯೂನಿಯನ್ನಿನ ಕಾರ್ಯದರ್ಶಿ ಬಿ. ಭುಜಂಗ ಮಾರ್ಲರು ಪ್ರೆಸ್ ಕಾರ್ಮಿಕರಲ್ಲಿ ಮನವಿ ಮಾಡಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO